ಕೆ. ಜಿ. ಎಫ್. ನಡುಗಿಸುತ್ತಿದ್ದ ಆರ್ಮುಗಂಗೆ ನಡುಕ

ತಾ 27-2-82ರಂದು ದ.ಸಂ.ಸ. ಕಾರ್ಯಕರ್ತರ ಮೇಲೆ ಆರ್ಮುಗಂ ಬೆಂಬಲಿಗರು ನಡೆಸಿದ ಹಲ್ಲೆಯನ್ನು ಪ್ರತಿಭಟಿಸಲು; ದ.ಸಂ.ಸ. ಕೆ.ಜಿ.ಎಫ್.ಶಾಖೆಯು ತಾ 21-3-82ರಂದು ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಪ್ರತಿಭಟನಾ ಮೆರವಣಿಗೆ ಉದ್ದೇಶದಿಂದ ದ.ಸಂ.ಸ. ಕಾರ್ಯಕರ್ತರು ಫೆಬ್ರವರಿ 27ರಿಂದ ಮಾರ್ಚಿ 20ರವರೆಗೆ ಕೆ.ಜಿ.ಎಫ್ ಪ್ರದೇಶದಲ್ಲಿ ಗಂಜಿ–ನೀರಿಲ್ಲದೆ ಹಗಲಿರುಳು ಶ್ರಮವಹಿಸಿ ಕೆಲಸ ಮಾಡಿದ್ದರು. ತಾ 21-3-82ರ ಮೆರವಣಿಗೆಗೆ ಹಳ್ಳಿಗಳಿಂದ ಸಾವಿರಾರು ಜನ ಮೆರವಣಿಗೆಯಲ್ಲಿ ಭಾಗವಹಿಸುವವರಿದ್ದರು. ಇದುವರೆಗೂ ಆರ್ಮುಗಂ ಅವರಿಗೆ ಭದ್ರಕೋಟೆಯಾಗಿದ್ದ ಕೆ.ಜಿ.ಎಫ್‌ನಲ್ಲಿ ಬಿರುಕು ಕಾಣತೊಡಗಿತ್ತು. ಆರ್ಮುಗಂ ಅವರನ್ನು ವಿರೋಧಿಸಿ ಬದುಕಿದ ವ್ಯಕ್ತಿಯೊಬ್ಬ ಕೆ.ಜಿ.ಎಫ್‌ನಲ್ಲಿ ಸಿಗುವುದು ಕಷ್ಟ. ಆರ್.ಪಿ.ಐ ಶಾಸಕರಾದ ಆರ್ಮುಗಂ ಅವರನ್ನು ಕಂಡು ಅಲ್ಲಿಯ ಎಸ್.ಪಿ. ಡಿ.ವೈ. ಎಸ್.ಪಿ. ಗಡಗಡ ನಡುಗುತ್ತಾರೆ ಅಂದಮೇಲೆ, ಇನ್ನು ಆರ್ಮುಗಂ ಆಳುವ ಪಕ್ಷದಲ್ಲಿದ್ದಿದ್ದರೆ ಪರಿಸ್ಥಿತಿ ಏನೇನಾಗುತ್ತಿತ್ತೋ ಊಹಿಸಲೂ ಕಷ್ಟ. ಶೇಕಡ 100ಕ್ಕೆ 90 ಭಾಗ ಹರಿಜನರಿರುವ ಕೆ.ಜಿ.ಎಫ್‌ನಲ್ಲಿ ಆರ್ಮುಗಂ ಅನಭಿಷಕ್ತ ಸಾಮ್ರಾಟ. ಜಾತಿಹೆಸರಿನಲ್ಲಿ ಕೆ.ಜಿ.ಎಫ್ ಹರಿಜನರು ಎಲ್ಲ ಅನ್ಯಾಯಗಳನ್ನೂ ಮುಚ್ಚಿಕೊಳ್ಳುತ್ತಿದ್ದು ಈಗ ತಳದಲ್ಲಿದ್ದ ಜೊಂಡುಕೊಚ್ಚೆ ಎಲ್ಲ ಮೇಲೆ ಬಂದು ತೇಲತೊಡಗಿದೆ.

21–3–82ರ 10–30 ಗಂಟೆ ಹೊತ್ತಿಗೆ ನಾನು ಕೆ.ಜಿ.ಎಫ್‌ನಲ್ಲಿದ್ದೆ. ಬಸ್ಸಿನಲ್ಲಿ ಹೋಗುತ್ತ ಅಂಬೇಡ್ಕರ್ ಪಾರ್ಕಿನ ಮುಂಭಾಗದಲ್ಲಿ ಸುಮಾರು 50-60ಜನ ಕಪ್ಪು ಬ್ಯಾಡ್ಜ್‌ಗಳನ್ನು ಧರಿಸಿ ಬ್ಯಾನರ್‌ಗಳನ್ನು ಹಿಡಿದುಕೊಂಡಿದ್ದರು. ರಸ್ತೆಯ ಎರಡು ಬದಿಗಳಲ್ಲೂ ರಿಸರ್ವ್ ಪೋಲಿಸರು ತಲೆಗಳಿಗೆ ಕಬ್ಬಿಣದ ಟೊಪ್ಪಿಗೆಗಳನ್ನು ಹಾಕಿಕೊಂಡು, ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದು ನಿಂತಿದ್ದರು. ಪರಿಸ್ಥಿತಿ ಗಂಭೀರವಾಗಿರಬೇಕು ಎನ್ನಿಸಿತು. ಹೋಗುತ್ತ ಬಸ್ ಸ್ಟ್ಯಾಂಡಿನ ಪಕ್ಕ ಪೋಲಿಸ್ ಸ್ಟೇಷನ್ ಕಾಣಿಸಿತು. ಅಲ್ಲಿ ಕೆ.ಜಿ.ಎಫ್ ಸಂಚಾಲಕ ರಾಮಚಂದ್ರ ನಿಂತಿದ್ರು. ಡಿವೈ ಎಸ್.ಪಿಗೂ ಅವರಿಗೂ ಮಾತುಕತೆ ನಡೆದಿತ್ತು. ಡಿವೈ ಎಸ್.ಪಿ. ಬಹಿರಂಗ ಸಭೆಯನ್ನು ಸಿಟಿಯಲ್ಲಿ ಮಾಡಲು ಕೊಡುವುದಿಲ್ಲ. ಬೇಕಾದರೆ ಊರಾಚೆ ಆಟದ ಮೈದಾನದಲ್ಲಿ ಮಾಡಿಕೊಳ್ಳಿ ಎನ್ನುತ್ತಿದ್ರು. ನಾವು ಅದೆಲ್ಲ ಸಾಧ್ಯವಿಲ್ಲ, ಎಲ್ಲರೂ ಎಲ್ಲಿ ಸಭೆ ನಡೆಸುತ್ತಾರೋ, ಅಲ್ಲೆ ನಮಗೆ ಅವಕಾಶ ಕೊಡಿ ಎಂದು ಒತ್ತಾಯಿಸಿದೆವು. ಹಾಗಾದರೆ ಎಸ್.ಪಿ.ಯವರನ್ನು ಕೇಳಿಕೊಳ್ಳಿ ಎಂದು ಹೇಳಿ ಆತ ಹೊರಟುಬಿಟ್ಟರು. ಸ್ವಲ್ಪಹೊತ್ತಿನ ನಂತರ ಎಸ್.ಪಿ. ಬಂದರು. ಊರಿನಲ್ಲಿ ಪರಿಸ್ಥಿತಿ ಗಂಭೀರವಾಗಿರುವುದರಿಂದ ಬಹಿರಂಗ ಸಭೆ ಮಾಡಲು ಕೊಡುವುದಿಲ್ಲ ಎಂದು ನಿರಾಕರಿಸಿದರು. ಅಷ್ಟು ಹೊತ್ತಿಗೆ ಏದುತ್ತ ಪಿ.ಸಿ.ಯೊಬ್ಬ ಬಂದು "ಸರ್ ಲಾರಿಗಳಲ್ಲಿ ಜನ ಬರುತ್ತಿದ್ದಾರೆ. ಅನಾವಶ್ಯಕ ಗಲಾಟೆ ಆಗುವ ಸಂಭವ ಇದೆ" ಎಂದ. ಎಸ್.ಪಿ.ಯವರು ಕೂಡಲೆ ನಮ್ಮನ್ನು ಸ್ವಲ್ಪ ಕಾಯಲು ಹೇಳಿ ಹೊರಗೆ ಹೋದರು. ಅಷ್ಟು ಹೊತ್ತಿಗೆ ಒಂದು ಲಾರಿ ತುಂಬ ಯುವಕರು 'ಜೈ' ಎಂದು ಕೂಗುತ್ತ ಬಂದರು. ರಾಮಚಂದ್ರ "ಲಾರಿಯಲ್ಲಿರುವವರೆಲ್ಲ ಹೊಸಬರು. ಇವರು ಆರ್ಮುಗಂ ಕಡೆಯವರಿರಬೇಕು. ನಮ್ಮ ಕಡೆಯವರಲ್ಲ, ರಾತ್ರಿಯಿಂದ ಏನೋ ಟ್ರೆಂಡ್ ಬದಲಾವಣೆಯಾಗಿದೆ ಸಾರ್"ಎಂದರು. ಮೈಯೆಲ್ಲ ಹುಷಾರಾಗಿದ್ದು ಕಾರ್ಯಕ್ರಮ ಮುಗಿಸಬೇಕು ಎಂದುಕೊಂಡೆವು. ಎಸ್.ಪಿಯವರನ್ನು ಕಾಯುತ್ತಾ ನಾವು ಪೋಲಿಸ್ ಸ್ಟೇಷನ್ ಮುಂದೆ ನಿಂತಿದ್ದೆವು.

(ಕಡೆಯ ಪುಟಕ್ಕೆ)

ಕಣ್ಣಾರೆ ವರದಿ

ಬಿ.ಕೃಷ್ಣಪ್ಪ

ಪಂಚಮ

ಸಂಪುಟ : 6 **ಸಂಚಿಕೆ** : 6-7 **ಏಪ್ರಿಲ್** : 1982 **ಬೆಲೆ** : 50ಪೈಸೆ

1982 : ಕೊಲೆ ಉತ್ಪಾದಕ ವರ್ಷ

ನವೆಂಬರ್ 18ರಂದು ಉತ್ತರಪ್ರದೇಶದ ದೇವೋಲಿಯಲ್ಲಿ 24 ಹರಿಜನರನ್ನು ಅಮಾನುಷವಾಗಿ ಕೊಲೆಗೈದ ಅಸಿಯನ್ನು ಆರುವುದಕ್ಕೆ ಮುಂಚಿತವಾಗಿ ಇನ್ನೊಂದು ಅದೇ ಹೆಜ್ಜೆಯನ್ನು ಕಂಡೆವು. ಅಳಲೂ ಕಣ್ಣೀರು ಬರದಂತೆ ದುಃಖವನ್ನು ನಾವು ಸ್ವಲ್ಪಮಟ್ಟಿಗೆ ಚೇತರಿಸಿಕೊಳ್ಳುವಷ್ಟರಲ್ಲಿ ಅದೇ ಉತ್ತರ ಪ್ರದೇಶದ ಮೈನಾಪುರಿ ಜಿಲ್ಲೆಯ ಸಾಧುಪುರ ಗ್ರಾಮದಲ್ಲಿ ತಾ 31–12–81ರಂದು ಹರಿಜನರನ್ನು ಕೊಂದ ವರದಿ 1–1–1982ರಂದು ಪತ್ರಿಕೆಯಲ್ಲಿ "ಹೊಸವರ್ಷದ ಶುಭಾಷಯ"ವನ್ನಾಗಿ ಕಂಡೆವು.

ಮೈನಾಪುರಿ ಜಿಲ್ಲೆಯು ಈಗ ಹರಿಜನರ ರಕ್ತದಲ್ಲಿ ಅಭಿಷೇಕ ಮಾಡಿದೆ. ಇನ್ನೂ ಹರಿಜನರ ರಕ್ತದಲ್ಲಿ ಓಕುಳಿಯನ್ನಾಡುವ ನಂಬಿಕೆಯೂ ಇದೆ. ಇಲ್ಲಿಯ ಯಾದವರು ಮತ್ತು ಠಾಕೂರರಿಗೆ ಹಸಿವುವಿಗೆ ಹಬ್ಬದೂಟವನ್ನು ಹರಿಜನರ ರಕ್ತದಿಂದಲೆ ಬಡಿಸುವ ಸಂಚಿನಲ್ಲಿ ಸರ್ಕಾರ ಮತ್ತು ಅಲ್ಲಿನ ಪೋಲಿಸರು ಬಂದಿದ್ದಾರೆ.

ಪೋಲ್‌ಪುರ್‌ನಲ್ಲಿ ಶ್ರೀಮತಿ ಇಂದಿರಾಗಾಂಧಿಯವರು 1982ನೇ ವರ್ಷವನ್ನು "ಉತ್ಪಾದನಾ ವರ್ಷ"ಎಂದು ಘೋಷಿಸಿದ್ದಾರೆ. ಆದರೆ ಅವರು ಹೇಳಿರುವ ಅಂಶದಲ್ಲಿ ಸತ್ಯವಿದೆ. ಇವರ ಮಾತಿನ ಅರ್ಥ ಹರಿಜನರ ಕೊಲೆಗಡುಕರನ್ನು "ಉತ್ಪಾದಿಸುವ ವರ್ಷ" ಅಥವಾ ಹರಿಜನರ ಕೊಲೆ ಗಡುಕ ವರ್ಷ.

ಬಿ.ಪಿ ಪ್ರಕಾಶಮೂರ್ತಿ ಚಿತ್ರದುರ್ಗ

1

ನಮ್ಮ ಮಾತು

'ಸಮತಾದಿನ':ದಲಿತರ ಮುಖಕ್ಕೆ ಬಿ.ಜೆ.ಪಿ. ಯ ಮಂಕು ಬೂದಿ

ದಲಿತರು ಈ ದೇಶದ ಅಡಿಗಲ್ಲು ಎಂದು ಎಲ್ಲಾಕಡೆ ಗೊತ್ತಾಗುತ್ತಿದ್ದಂತೆ ಪಟ್ಟಭದ್ರರೆಲ್ಲ ದಲಿತರ ಮುಖಕ್ಕೆ ಮಂಕುಬೂದಿ ಎರಚುವ ಕಾರ್ಯಕ್ರಮಗಳನ್ನು ಹೆಚ್ಚು ಮಾಡುತ್ತಾ ತಮ್ಮ ತಮ್ಮ ಜಾಗ ಬದ್ರುಮಾಡಿಕೊಳ್ಳ ತೊಡಗಿದ್ದಾರೆ,

ಕುರ್ಚಿ ಚೂರು ಅಲುಗಿದರೆ ಸಾಕು ಜೀವವೇ ಹೋದಂತೆ ಆಡುವ ಕಾಂಗ್ರೆಗಳು ದಲಿತರ ಕಗ್ಗೊಲೆಗಳ ನಡುವೆ "ದಲಿತೋದ್ಧಾರ" ಬೊಗಳುತ್ತಾ ದಲಿತರಿಗೆ ನಿದ್ರೆ ಗುಳಿಗೆ ಹಂಚುತ್ತಿದ್ದಾರೆ. ಇನ್ನೊಂದು ಕಡೆ ಭಾರತಮಾತೆಯನ್ನು ಗುತ್ತಿಗೆಗೆ ಹಿಡಿದುಕೊಂಡಂತೆ ಆಡುವ ಬಿಜೆಪಿಗಳು "ಅಂಬೇಡ್ಕರ್ ಹಿಂದೂ ಧರ್ಮದ ಪುನರುದ್ಧಾರಕ" ಎಂದು ಜಪಿಸುತ್ತಾ ದಲಿತರನ್ನು ಶಾಶ್ವತ ಕುರುಡರನ್ನಾಗಿ ಮಾಡಲು ಶ್ರಮಿಸುತ್ತಿದ್ದಾರೆ.

ಹಿಂದೂ ಧರ್ಮ ನಾಶವಾಗದೆ ಅದರೊಳಗಿನ ಜಾತಿಪದ್ಧತಿ ಅಸ್ಪೃಶ್ಯತೆ ನಾಶವಾಗುವುದಿಲ್ಲ ಎಂದು ಘೋಷಿಸುತ್ತಾ ಜೀವಮಾನವಿಡೀ ದಲಿತರ ಬಿಡುಗಡೆಗಾಗಿ ಹೋರಾಡಿದ ಕ್ರಾಂತಿಕಾರಿ ಅಂಬೇಡ್ಕರ್ ಮುಖಕ್ಕೆ ಬಿಜೆಪಿಗಳು ನಾಮ, ವಿಭೂತಿ ಬಳಿದು ಕತ್ತಿಗೆ ಏಕ್ಕಡದ ಹಾರ ಹಾಕತೊಡಗಿದ್ದಾರೆ. ಹಿಂದೂ ಸುಸ್ಕೃತಿ ವ್ಯವಸ್ಥೆ ಪುರಾಣಗಳನ್ನೆಲ್ಲ ಇಂಡಿಯಾದ ಆಸ್ತಿಯೆಂದು ಪೂಜಿಸುವ ಇವರು ಅಂಬೇಡ್ಕರ್ ಜನ್ಮದಿನವಾದ ಏಪ್ರಿಲ್ 14ರಂದು "ಸಾಮಾಜಿಕ ಸಮತಾದಿನ" ಆಚರಿಸುತ್ತಾ ಅಂಬೇಡ್ಕರರನ್ನು ಶಾಶ್ವತವಾಗಿ ಕೊಲೆ ಮಾಡಲು ಸಂಚು ಮಾಡಿದ್ದಾರೆ. ಕೂಡಲೆ ಬಿಜೆಪಿಗಳ ಕೈಯ್ಯಿಂದ ಈ ಅಂಬೇಡ್ಕರ್ ಕೊಲೆಯನ್ನು ತಪ್ಪಿಸುವುದರ ಮೂಲಕ ದಲಿತರು ತಮ್ಮ ಮೇಲಿನ ಕೊಲೆ ಸುಲಿಗೆಗಳಿಗೆ ತಡೆಯಾಕಬೇಕಾಗಿದೆ. —ಸಂ.

ಅಡಿಕೆ ಸುಲಿವವರ ಸುಲಿಗೆಗೆ ಸಂಘರ್ಷ ಸಮಿತಿ ತಡೆ

ಅಡಿಕೆ ಅಗಿದುಗಿಯುವಂತೆ ಸಾಗರದಲ್ಲಿ ಅಡಿಕೆ ಸುಲಿಯುವ ಕೂಲಿಗಳನ್ನು ಅಗಿದುಗಿಯುವ ಅಡಿಕೆಸಾಹುಕಾರರು ಇತ್ತೀಚೆಗೆ ತಮ್ಮ ಹಲ್ಲುಗಳನ್ನು ಮುಟ್ಟಿ ನೋಡಿಕೊಳುವಂತಾಯಿತು. ಬೆಳಗಿನ ರಘಾವದಿಂದ ರಾತ್ರಿವರೆಗೂ ಅಡಿಕೆ ಸುಲಿಯುವ ಊರಿನ ಎರಡು ಸಾವಿರ ಮಂದಿ ಹೆಂಗಸರು ಮಕ್ಕಳಿಗೆ ದಿನ ಪೂರ್ತಾ ತಮ್ಮನ್ನು ತಾವೇ ಸುಲಿದು ಕೊಳ್ಳುತ್ತಿರುವುದು ಗೊತ್ತೇ ಇರಲಿಲ್ಲ. ಸುಮಾರು 12 ತಾಸುಗಳ ಶ್ರಮಕ್ಕೆ ಸಾಗರದ ಬಡಸಾಹುಕಾರರು ಕೊಡುತ್ತಿದ್ದ ಕೂಲಿ ಕೇವಲ 2ರೂಪಾಯಿ. ಸಾಗರದ ದಲಿತ ಸಂಘರ್ಷಸಮಿತಿ ಈ ಸುಲಿಗೆ ವಿರುದ್ಧ ಕೂಲಿಗಾರರನ್ನು ಸಂಘಟಿಸಿ ಸಾಹುಕಾರರು ಭೂಬಿಟ್ಟ ಬಡ ಹಮಾಲಿಗಳಿಂದ ಏಟು ತಿನ್ನಬೇಕಾಯಿತು. ಬಡವರನ್ನು ಬಡವರ ವಿರುದ್ಧ ಎತ್ತಿಕಟ್ಟಿ ಸೇಡುತೀರಿಸಿಕೊಳ್ಳಬಯಸುವ ಸಾಹುಕಾರ ಕುನ್ನಿಗಳನ್ನು ಸಮಿತಿ ಇತ್ತೀಚೆಗೆ ಮಣಿಸಿತು. ಅಡಕೆ ಸುಲಿಯುವ ಕೂಲಿಕಾರರು ಒಟ್ಟಿಗೆ ಇಡೀ ದಿನ ಮುಷ್ಕರ ಹೂಡಿ ಪ್ರತಿಭಟಿಸಿ ಸಾಹುಕಾರರನ್ನು ತಮ್ಮ ಬಳಿಗೆ ಬಂದು ಬಡತನದ ಮಾನವಿದ್ದವರು ಕೊಡಬೇಕಾದ ಕೂಲಿಯ ಹತ್ತಿರ ಹತ್ತಿರವನ್ನಾದರೂ ಕೊಡಲೊಪ್ಪುವಂತೆ ಮಾಡಿದರು. ಹಮಾಲಿಗಳೀಗ ಕೂಲಿಕಾರರ ಪರ. ವರದಿ : ನಾಗ

ಮರಾಠಾವಾಡ ವಿ. ವಿ. : ದಲಿತ ಪಾಂಥರ್ಸ್ ಪಟ್ಟು

ಮಹಾರಾಷ್ಟ್ರ ದಲಿತ್ ಪ್ಯಾಂಥರ್ಸ್ ಕಾರ್ಯಕಾರೀ ಸಮಿತಿಯ ಸಭೆಯು ಮುಂಬಯಿ ದಲಿತ್ ಪ್ಯಾಂಥರ್ಸ್ ಕಛೇರಿಯಲಿ 10-12-82ರಂದು ನಡೆಯಿತು. 1979ರ ಶರದ್ ಪವಾರ್ ಮಂತ್ರಿಮಂಡಳವು ಸರ್ವಾನುಮತದಿಂದ ನಿರ್ಣಯ ತೆಗೆದುಕೊಂಡಿದ್ದಂತೆ ಮರಾಠಾವಾಡಾ ವಿಶ್ವವಿದ್ಯಾಲಯಕ್ಕೆ "ಡಾ. ಅಂಬೇಡ್ಕರ್ ಮರಾಠಾವಾಡಾ ವಿಶ್ವವಿದ್ಯಾಲಯ" ಎಂದು ಪುನರ್ ನಾಮಕರಣ ಮಾಡದಿರುವುದರ ಬಗ್ಗೆ ತೀವ್ರ ಖಂಡನೆ ಸೂಚಿಸಿ ಮಾರ್ಚಿ 30 ರಂದು ಮುಂಬಯಿಯಲ್ಲಿ ನಡೆಯುವ ವಿಧಾನ ಸಭಾ ಅಧಿವೇಶನದ ಸಂದರ್ಭದಲ್ಲಿ ಆ ಅಧಿವೇಶನಕ್ಕೆ ದೇಶದ ಎಲ್ಲಾ ಕಡೆಗಳಿಂದ ಬರುವ ದಲಿತರು ಬೃಹತ್ ಮೆರವಣಿಗೆಯಲ್ಲಿ ಸಾಗಬೇಕೆಂದೂ ನಿರ್ಧರಿಸಲಾಯ್ತು. ಈ ಸಂಬಂಧದಲ್ಲಿ ದಿನಾಂಕ 7-3-82ರಂದು ಮುಂಬಯಿಯಲ್ಲಿ ಮಹಾರಾಷ್ಟ್ರದ ಎಲ್ಲ ಪಕ್ಷಗಳ ದಲಿತ ಶಾಸಕರ ಸಭೆಯೊಂದನ್ನು ಕರೆದು ಈ ಕಾರ್ಯಕ್ರಮಕ್ಕೆ ಅವರ ಬೆಂಬಲವನ್ನು ಕೋರಬೇಕೆಂದೂ ನಿರ್ಣಯಿಸಲಾಯಿತು.

ಮಹಾರಾಷ್ಟ್ರದಲ್ಲೇ ದಲಿತರ ಅತ್ಯಂತ ಬಲಾಢ್ಯ ಕೇಂದ್ರವಾದ ಮರಾಠಾವಾಡಾ ವಿಭಾಗದ (ನಾಂದೇಡ, ಪರಭಣಿ, ಔರಂಗಾಬಾದ್ ಉಸ್ಮಾನಾಬಾದ್ ಮತ್ತು ಬೀಡ್ ಜಿಲ್ಲೆಗಳು ಸೇರಿದಂತೆ) ದಲಿತ್ ಪ್ಯಾಂಥರ್ಸ್ ಸಭೆಯು 28-2-82ರಂದು ಉಸ್ಮಾನಾಬಾದ್ ಜಿಲ್ಲೆಯ ತಾತೂರ್‌ನಲ್ಲಿ ಮಹಾರಾಷ್ಟ್ರ ದಲಿತ್ ಪ್ಯಾಂಥರ್ಸ್ ಸಂಘಟಕ ಹಾಗೂ ಕಾರ್ಯದರ್ಶಿಗಳಾದ ಎಸ್.ಎಂ. ಪ್ರಧಾನ ಮತ್ತು ಟಿ.ಎಂ. ಕಾಂಬಳೆ ಅವರ ಮುಂದಾಳತ್ವದಲ್ಲಿ ನಡೆಯಿತು.

1. 30-3-82ರಂದು ಮುಂಬಯಿ ಅಧಿವೇಶನಕ್ಕೆ ಮರಾಠಾವಾಡಾ ಭಾಗದ ಐದು ಜಿಲ್ಲೆಗಳಿಂದ ಮೂರು ಲಕ್ಷ ಜನ ಹೋಗಬೇಕೆಂದು ನಿರ್ಧರಿಸಲಾಯಿತು, 2. ಅಷ್ಟರಲ್ಲಿ ಎಲ್ಲಾ ಹಳ್ಳಿ–ತಾಲ್ಲೂಕುಗಳ ಪ್ರಯಾಣ ಮಾಡಿ ಜನರನ್ನು ಸಂಘಟಿಸಬೇಕೆಂದೂ ನಿರ್ಧರಿಸಲಾಯಿತು. 3. ದಲಿತ್ ಪ್ಯಾಂಥರ್ಸ್ ಶ್ರಮಿಕ ಸಂಘಟನೆಯಾದ "ಕಾಮಗಾರ್ ಶಕ್ತಿ ಯೂನಿಯನ್" ಮರಾಠಾವಾಡಾದ ಎಲ್ಲಾ ಜಿಲ್ಲೆಗಳಲ್ಲಿ ತಾಲ್ಲೂಕುಗಳಲ್ಲಿ ಸಂಘಟಿಸಬೇಕೆಂದೂ ನಿರ್ಣಯಿಸಲಾಯಿತು. 4. ಜುಲೈ 82ರ ಹೊತ್ತಿಗೆ ಐದೂ ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದಲ್ಲಿ ಭೂಹೀನರ ಸಮ್ಮೇಳನ ನಡೆಸಬೇಕೆಂದೂ ನಿರ್ಧರಿಸಲಾಯಿತು. 5 ದಲಿತ್‌ಪ್ಯಾಂಥರ್ಸ್ ಸೂಚನೆಯಂತೆ Students Council of India ಎಂಬ ವಿದ್ಯಾರ್ಥಿ ಸಂಘಟನೆ ಮಾಡಲು ನಿರ್ಧರಿಸಲಾಯಿತು, 6. ದೇವೋಲಿ-ಸಾಧುಪುರ ಘಟನೆಗಳಿಗೆ ನೈತಿಕವಾಗಿ ಕಾರಣವಾಗಿರುವ ಉತ್ತರಪ್ರದೇಶದ ರಾಜ್ಯಸರ್ಕಾರವನ್ನು ವಜಾಮಾಡಬೇಕು. 7. ಬೆಲೆಯೇರಿಕೆಯ ಪ್ರಮಾಣದಲ್ಲಿ ದಲಿತ ವಿದ್ಯಾರ್ಥಿಗಳ ವಿದ್ಯಾರ್ಥಿವೇತನದಲ್ಲಿ ಹೆಚ್ಚಳವಾಗಬೇಕು. 8. ಮಹಾರಾಷ್ಟ್ರದಲ್ಲಿ ಮರಾಠಾ ಜನಾಂಗವನ್ನು ಸಂಘಟಿಸಿ ಜಾತೀವಾದ ಹರಡುತ್ತಿರುವ "ಮಹಾರಾಷ್ಟ್ರ ಮರಾಠಾ ಮಹಾಸಂಘ" ವನ್ನು ಬಹಿಷ್ಕರಿಸಿ ಅದರ ಅಧ್ಯಕ್ಷ ಅಣ್ಣಾರಾವ್ ಪಾಟೀಲ ಅವರನ್ನು ಮಹಾರಾಷ್ಟ್ರದಿಂದ ಗಡೀಪಾರು ಮಾಡಬೇಕು.

‘ಎಲ್ಲಾ ಜಾತಿ ಗಂಡಸರಿಗೂ ಒಂದೇ ಮರ್ಮಾಂಗ’

ಕೋಲಾರ ತಾಲ್ಲೂಕು ವೆಲಗಲಬುರ್ರ್ರಿ ಗ್ರಾಮದ ಸವರ್ಣೀಯರಿಗೂ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರಿಗೂ ನಡೆದ ಸಂಭಾಷಣೆಯನ್ನು ಶ್ರೀ ಬಿ. ಮುನಿಯಪ್ಪ ಬರೆದು ಕಳಿಸಿದ್ದಾರೆ. ಇಂಥವನ್ನು ಪಂಚಮ ಸ್ವಾಗತಿಸುತ್ತದೆ.

ಸವರ್ಣೀಯರಜೊತೆ ಸಂಘರ್ಷ ಸಮಿತಿ ಮಾತುಕತೆ

ಸವರ್ಣೀಯರು : ನೀವು ಜಾತಿ ವಿರೋದಿಸುವಿರಿ ಏಕೆ ?

ದ. ಸಂ. ಸ : ಹೌದು. ಜಾತಿಗೆ ವಿರೋಧಿಗಳು. ಜಾತಿಗೆ ತಕ್ಕಂತೆ ಮಾನವರಲ್ಲೆ ಭಿನ್ನತೆ ಇದೆಯೆ ?

ಸವರ್ಣೀಯ : ಇದೆ ! ಈಗ ಮಾವಿನ ಮರ, ಹುಣಸೇಮರ,ಬೇವಿನಮರ,ವಂಗೆಮರ ಇತ್ಯಾದಿ ಜಾತಿಗಳಿಲ್ಲವೆ ? ಅದೇ ರೀತಿ ಮಾನವರಲ್ಲಿಯೂ ಒಕ್ಕಲಿಗ, ಬ್ರಾಹ್ಮಣ, ವಡ್ಡ, ಹೊಲೆಮಾದಿಗ ಮುಂತಾದ ಜಾತಿಗಳಿವೆ ತಪ್ಪೇನು ?

ದ. ಸಂ. ಸ : ಸರಿಯಪ್ಪ ಈಗ ಮಾವು ಹೇಗಿರುತ್ತದೆ ?

ಸವರ್ಣೀಯ : ಹಣ್ಣಾದರೆ ತಿನ್ನುವುದಕ್ಕೆ ರುಚಿಯಾಗಿರುತ್ತದೆ.

ದ. ಸಂ. ಸ : ಬೇವು ಹೇಗಿರುತ್ತದೆ ?

ಸವರ್ಣೀಯ : ಕಹಿಯಾಗಿರುತ್ತದೆ.

ದ. ಸಂ. ಸ : ಹುಣಸೆ ಹೇಗಿರುತ್ತದೆ ?

ಸವರ್ಣೀಯ : ಹುಳಿಯಾಗಿರುತ್ತದೆ.

ದ. ಸಂ. ಸ : ಅಂದರೆ ಬೇವಿಗೂ, ಮಾವಿಗೂ ವ್ಯತ್ಯಾಸವಿದೆ, ಹುಣಸೆಗೂ, ವಂಗೆಗೂ ವ್ಯತ್ಯಾಸವಿದೆ, ಆದ್ದರಿಂದ ಅವುಗಳ ಜಾತಿಗಳೂ ಪ್ರತ್ಯೇಕವೆಂದು ನಾವು ತಿಳಿದಂತಾಯಿತು. ಈಗ ಎಲ್ಲಾ ಜಾತಿಯ ಗಂಡಸರಿಗೂ ಮತ್ತು ಹೆಂಗಸರಿಗೂ ಇರುವ ಮರ್ಮಾಂಗಗಳೂ ಒಂದೇ ಆಗಿರುವುದರಲ್ಲಿ ನಿಮಗೇನಾದರೂ ಅನುಮಾನ ಇದೆಯಾ ?

ಸವರ್ಣೀಯ : ಅನುಮಾನವಿಲ್ಲ.

ದ. ಸಂ. ಸ : ಅಲ್ಲಿಗೆ ಸೃಷ್ಟಿಯಲ್ಲಿ ಎಲ್ಲಾ ಗಂಡಸರಿಗೂ ಇರುವ ಮರ್ಮಾಂಗ ಒಂದೇ ಎಂದಾದರೆ ಎಲ್ಲಾ ಗಂಡಸರೂ ಒಂದೇ ಎಂದಾಯಿತು. ಇಲ್ಲಿ ಜಾತಿ ‘ಗಂಡೇ’ ಎಂದಾಯಿತು ಅಲ್ವೆ ?

ಸವರ್ಣೀಯ : ಹೌದು ಸಾ.

ದ. ಸಂ. ಸ : ಇಲ್ಲಿ ಎಲ್ಲಾ ಹೆಂಗಸರ ಮರ್ಮಾಂಗಗಳೂ ಒಂದೇ ಎಂದಾದರೆ ಎಲ್ಲಾ ಹೆಂಗಸರೂಒಂದೇ ಎಂದಾಯಿತು.ಇಲ್ಲಿ ಜಾತಿ ‘ಹೆಣ್ಣೆ’ ಎಂದಾಯ್ತು, ಈಗಲೂ ನೀವು ನಂಬಲು ಅನುಮಾನವಾದರೆ ಒಂದು ಕೆಲ್ಸ ಮಾಡಿ.

ಸವರ್ಣೀಯ : ಅದೇನ್ನಾ ?

ದ. ಸಂ. ಸ : ನಿಮ್ಮೂರಲ್ಲಿ ಎಷ್ಟು ಜಾತಿಗಳಿವೆ?

ಸವರ್ಣೀಯ : ೧೪ ಜಾತಿಗಳಿವೆ ಸಾ.

ದ. ಸಂ. ಸ : ೧೪ ಜಾತಿಗಳಿಂದ ೧೪ ಗಂಡು ಮಕ್ಕಳನ್ನು ಮತ್ತು ೧೪ ಹೆಣ್ಣು ಮಕ್ಕಳನ್ನು ಭಾರತದಲ್ಲೇ ಗಣ್ಯನಾದ ವೈದ್ಯನ ಹತ್ತಿರವಾಗಲೀ ಅಥವಾ ಭಾರತದಲ್ಲೇ ಹೆಸರಾದ ಜ್ಯೋತಿಷ್ಯನ ಹತ್ತಿರವಾಗಲಿ ಕರೆದುಕೊಂಡು ಹೋಗಿ, ಆ ಮಕ್ಕಳನ್ನು ಬೆತ್ತಲೆ ಮಾಡಿ ಪರೀಕ್ಷಿಸುವಂತೆ ಹೇಳಿ. ವೈದ್ಯನಾಗಲೀ ಅಥವಾ ಜ್ಯೋತಿಷಿಯಾಗಲೀ ಮಕ್ಕಳ ಅಂಗಾಗಳನ್ನು ಪರೀಕ್ಷಿಸಿ ‘ಜಾತಿ’ಯನ್ನು ಹೇಳಿದಾಗ, ಅವರು ಹೇಳುವ ಜಾತಿಗಳು ಸತ್ಯವೆಂದು ನಾವೆಲ್ಲಾ ನಂಬೋಣ.

ಸವರ್ಣೀಯ : ಎಲ್ಲಿ ಪರೀಕ್ಷಿಸಿದರೂ ಇಷ್ಟೆ ಬಿಡಿ ಸಾ,

ದ. ಸಂ. ಸ : ಅಥವಾ ಬೇರೆ ಬೇರೆ ಗಂಡು ಹೆಣ್ಣುಗಳಿಗೆ ಮದುವೆ ಮಾಡಿನೋಡಿ. ಮಕ್ಕಳಾಗುವುದಿಲ್ಲವೆ ?

ಸವರ್ಣೀಯ : ಅಯ್ಯೋ ಅದರಲ್ಲೇನು ? ಆಗುತ್ತೆ!

ದ. ಸಂ. ಸ : ಆ ಮಕ್ಕಳೇ ಭಾರತದ ‘ಬೆಳಕು’ಗಳು ನೆನಪಿರಲಿ.

....


ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಕೊಂಡೇತಿಮ್ಮನ ಹಳ್ಳಿ ಒಂದು ಮಾದರಿ ಗ್ರಾಮ ಎನ್ನಿಸಿತ್ತು. ಎಲ್ಲ ಜಾತಿಯ ಎಲ್ಲ ತರದ ಜನ ಆ ಊರಲ್ಲಿದ್ದರು. ಜನ, ದನಗಳ ಆಸ್ಪತ್ರೆ, ಶಿಶು ವಿಹಾರದಿಂದ ಹಿಡಿದು ಹೈಸ್ಕೂಲುವರೆಗಿನ ಶಿಕ್ಷಣ ಶಾಲೆಗಳು, ಸಹಕಾರ ಸಂಘ ಎಲ್ಲ ಇದ್ದವು. ಆಗ 1967ರ ಸಮಯ ನಾನು ಎಸ್. ಎಸ್. ಎಲ್. ಸಿಗಾಗಿ ಓದುತ್ತಿದೆ. ನಮ್ಮ ಅಪ್ಪ ಆ ಊರಲ್ಲಿ ಮೇಷ್ಟ್ರಾಗಿದ್ದರು. ಅದ್ದರಿಂದ ನಮ್ಮ ಮನೆಯವರೆಲ್ಲ ಆ ಊರಲ್ಲೇ ಇದ್ದೆವು. ನಾನು ಆ ಮುಂಚೆ ಮಧುಗಿರಿ ಪಟ್ಟಣದಲ್ಲಿ ಓದುತ್ತಿದ್ದದ್ದರಿಂದ ಒಗೆದ, ಇಸ್ತ್ರಿ ಮಾಡಿದ ಸ್ಲಾಗು, ಪೈಜಾಮ ಹಾಕುವ ರೂಢಿ ಇತ್ತು. ಆದರೂ ಊರೊಳಗೆ ನಾನು ಓಡಾಡುವಾಗ, ಈ ಹುಡುಗ ಯಾರು ಎನ್ನುವ ಪ್ರಶ್ನೆಗಳು ಏಳುತ್ತಿದ್ದವು. ಆಗ ಮಾದೀರ ಮೇಷ್ಟ್ರ ಮಗ ಅನ್ನುವುದು ಊರ ಜನಗಳ ರೂಢಿಯಾಗಿತ್ತು.

ಮೈಲಿಗೆ: ಕಾಗದವೊ ಮೆದುಳೊ?

ಒಂದು ಸಾರಿ ನಮ್ಮ ಊರು ಬೆಲ್ಲದ ಮಡುವಿಗೆ ಹೋಗಿ ವಾಪಸು ಬರುತ್ತಿದ್ದೆ. ಮಧುಗಿರಿಯಲ್ಲಿ ನನಗೆ ಗುರುತಿದ್ದವರೊಬ್ಬರು ಸಿಕ್ಕಿ, ಕೊರಡೇ ತಿಮ್ಮನ ಹಳ್ಳಿಯಲ್ಲಿ ನನ್ನ ಸ್ನೇಹಿತರಿದ್ದಾರೆ ಅವರಿಗೆ ಕೊಡಿ’ ಎಂದು ಒಂದು ಕಾಗದ ಬರೆದುಕೊಟ್ಟರು. ಊರು ಸೇರುವಾಗ ರಾತ್ರಿಯಾಗಿತ್ತು. ಬೆಳಿಗ್ಗೆಯೇ ಹೋಗಿ ಗ್ರಾಮ ಸೇವಕರ ಕ್ವಾರ್ಟರ್ಸ್ ಮೆಟ್ಟಲು ಹತ್ತಿ ಸುಬ್ಬರಾವ್‌ಗಾಗಿ ಕೂಗಿದೆ. ಸುಬ್ಬರಾವ್ ಅದೇ ಊರಿನ ಶ್ಯಾನುಭೋಗರ ಮಗ. 25 ರ ಯುವಕ. ನೀಟಾಗಿ ಕಟಿಂಗ್ ಮಾಡಿಸಿದ್ದು ಸ್ಲಾಗು ಪಂಚೆ ಹಾಕಿದ್ದ. ವಿಲೇಜ್ ಅಕೌಂಟೆಂಟ್ ಆಗಿ ಅದೇ ಊರಿನಲ್ಲಿದ್ದ. ಗ್ರಾಮ ಸೇವಕರು ಇಲ್ಲದ್ದರಿಂದ ಅವರ ಕ್ವಾರ್ಟರ್ಸ್‌ನಲ್ಲಿಯೇ ಇದ್ದದ್ದು. ಒಳಗಿನಿಂದ ಬಂದವನು ಕೈ ಸನ್ನೆಯಿಂದ ದೂರ ಎನ್ನುವಂತೆ ತೋರಿಸುತ್ತಾ, ಮಾತನಾಡುತ್ತಾ ಮೆಟ್ಟಿಲಿನಿಂದ ದೂರ ಕರೆದು ತಂದ. ನಾನು ಕೊಡಲು ಹೋದ ಕಾಗದವನ್ನು ಅಲ್ಲಿಟ್ಟು ಹೋಗು ಎಂದು ನೆಲ ತೋರಿಸಿದ ಮನೆ ಮುಂದೆಲ್ಲ ಹಸಿರಾಗಿ ಹುಲ್ಲು ಬೆಳೆದಿತ್ತು. ರಾತ್ರಿ ಬಿದ್ದ ಇಬ್ಬನಿಯಿಂದಾಗಿ. ತುಂತುರು ಹನಿಯಿಂದ ದಪ್ಪ ಹನಿಯವರೆಗಿನ ಎಲ್ಲ ಗಾತ್ರದ ಹನಿಗಳೂ ಹುಲ್ಲಿನ ಮೇಲೆಲ್ಲ ಬೆಳಗಿನ ಬಿಸಿಲಿಗೆ ಮಿಂಚುತ್ತಿದ್ದವು. ಕಾಗದ ಅಲ್ಲಿಟ್ಟು ಮನೆ ದಾರಿ ಹಿಡಿದೆ, ಅಷ್ಟು ದೂರ ಹೋದ ನಂತರ ಆಗಾಗ ತಿರುಗಿ ನೋಡುತ್ತಿದ್ದೆ. ಹುಲ್ಲಿನ ಮೇಲೆ ಕೈಯಾಡಿಸಿ ಉಗುರಿಗೆ ಬಂದ ನೀರನ್ನೇ ಕಾಗದದ ಮೇಲೆ ಚಿಮುಕಿಸಿ ಕಾಗದ ಕೈಗೆತ್ತಿಕೊಂಡ. ನಾನು ಹೊತ್ತು ತಂದ ಕಾಗದದಲ್ಲಿನ ವಿಷಯ ಸುಬ್ಬರಾವ್ ಮೆದಳು ಸೇರುತ್ತಿತ್ತು. ಕಾಗದ, ಮೆದುಳು ಎರಡರಲ್ಲಿ ಯಾವುದು ಮೈಲಿಗೆ ಎಂದು ಯೋಚಿಸುತ್ತಾ ಮನೆ ಸೇರಿದೆ.

—ರಂಗಸ್ವಾಮಿ ಬೆಲ್ಲದಮಡು

ದಲಿತರ ಕತ್ತಿಗೆ ನೇತುಬಿದ್ದ ತಮಟೆ



ಎಂದೋ ಖುಷಿಗೆ ಬಡಿದ ತಮಟೆಯು ಒಂದು ಜನಾಂಗದ ಕುತ್ತಿಗೆಗೆ ನೇತುಬಿದ್ದು ಅವರನ್ನು ಗುಡಿಯಿಂದ ದೂರ ಹಾಗೂ ಊರಿನಿಂದ ಹೊರಗೆ ಇರಿಸಿದೆ. ಶತಮಾನಗಳಿಂದಲೂ ಅದರ ಕ್ರೌದ್ರನಾದ ಅವಮಾನವೀಯತೆಯನ್ನು ಸಾರುತ್ತಿದೆ. ಸತ್ತಪ್ರಾಣಿಯ ಚರ್ಮದಿಂದಾದ ತಮಟೆಯು ಕ್ರೌರ್ಯಕ್ಕೆ ಒಳಪಟ್ಟ ಕ್ಷೀಣಧ್ವನಿ. ಅದು ಇಲ್ಲದಿದ್ದರೆ ಯಾವ ದೇವರೂ ಕುಣಿಯಲಾರವು. ಯಾವಹಬ್ಬವೂ ನಡೆಯಲಾರದು. ಅದರ ರೌದ್ರನಾದ ಯಾರಿಗೆ ಏನನ್ನು ಮಾಡದಿದ್ದರೂ, ಅದನ್ನು ನಂಬಿದವರನ್ನಂತೂ ಹೀನ ಸ್ಥಿತಿಯಲ್ಲಿರಿಸಿದೆ. ಕೆಲವು ಜೀವಿಗಳನ್ನೂ ಬಲಿತೆಗೆದುಕೊಂಡಿದೆ. ನಮ್ಮ ಈ ನಾಡಿನಲ್ಲಿ ತಮಟೆ ಬಡಿಯುವವರು ಹರಿಜನರು. ಕೆಲವು ಹಬ್ಬಗಳಲ್ಲಂತೂ ಅವನ ಮಗ ಸತ್ತಿದ್ದರೂ, ಹೆಂಡತಿ ಹೆರುತ್ತಿದ್ದರೂ, ಬಂದು ತಮಟೆಬಡಿಯಬೇಕು. ಇದು ಎಲ್ಲಕಡೆಯೂ ಇರಲಾರದು. ಕೆಲವು ಕಡೆಯಂತು ಅವನು ಯಾವ ಕಾರಣವನ್ನು ಹೇಳದೆ, ಹಬ್ಬದ ದಿನ ಪುಗಸಟ್ಟೆ ತಮಟೆ ಬಡಿದು, ಗುಡಿಯಿಂದ ದೂರ ನಿಂತು, ಅರ್ಧಹೋಳು ಕಾಯನ್ನೊ, ಒಂದು ಬಾಳೆಹಣ್ಣನ್ನೊ, ಈಸಿಕೊಂಡು ಹೋಗಬೇಕು. ಜನರಂತು "ಯಾರ ಉಪಕಾರಕ್ಕೆ ಬಡಿತಾನೆ? ಬಡಿಯದಿದ್ದರೆ ದೇವರೆ ಅವನನ್ನು ಬಡಿಯುತ್ತದೆ" ಎಂದೆನ್ನುತ್ತಾರೆ. ಇದನ್ನು ತಮಟೆಬಡಿಯುವವರೂ ಒಪ್ಪಿಕೊಳ್ಳುತ್ತಾರೆ.

ಮನುಷ್ಯನನ್ನು ಮೃಗವಾಗಿಸಿದ ಈ ಅನಿಷ್ಟ ತಮಟೆಯನ್ನು ಈ ಕೂಡಲೇ ತೆಗೆದು ಬೀಸಿಹೊಗೆಯಬೇಕು. ಮಂಡ್ಯಜಿಲ್ಲೆಯ ಕುರುಬರು ಬೀರೇ ದೇವರೆಂದು ಒಂದು ಮಾಂಸ ತಿನ್ನುವ ದೇವರನ್ನು ಪೂಜಿಸುತ್ತಾರೆ. ಹಾಗೂ ತಲೆಯಮೇಲೆ, ಹೊತ್ತುಕೊಂಡು ಕುಣಿಯುತ್ತಾರೆ. ಈ ಕುಣಿತಕ್ಕೆ ತಮಟೆ ಇರಲೆ ಬೇಕು. ಅದನ್ನು ಬಡಿಯುವವನು ಕುಣಿಯುವವನಿಗಿಂತ ದೂರ ಇರಬೇಕು. ಅಕಸ್ಮಾತ್ ದೇವರ ವಸ್ತ್ರ, ವಡವೆ ಮುಟ್ಟಿದರೆ ಹೊಳೆಗೆ ತೆಗೆದುಕೊಂಡು ಹೋಗಿ ತೊಳೆದುಕೊಂಡು ಬರುತ್ತಾರೆ. ಇಷ್ಟೆಲ್ಲ ಅನಾಹುತ ಈ ತಮಟೆಯಿಂದ. ಈ ಬೀರೇದೇವರಿಗೆ ತಮಟೆ ಬಡಿಯುವುದರಿಂದ ಯಾವ ಇನಾಮು ಇಲ್ಲ, ಕೂಲಿಯೂ ಇಲ್ಲ. ಬಡಿದಾದ ಮೇಲೆ ತನ್ನ ಗುಡಿಸಲಿಗೇ ಹೋಗಿ ನೀರು ಎಡಕಿ ದಣಿವಾರಿಸಿಕೊಳ್ಳಬೇಕು. ಇದಾವ ಗ್ರಾಚಾರ ಅಂತಿನಿ?

ಮಂಡ್ಯ ಜಿಲ್ಲೆಯ ಕದಬಹಳ್ಳಿಯಲ್ಲೊಮ್ಮೆ ಬೀರೆದೇವರಿಗೆ ತಮಟೆ ಬಡಿಯಲಿಲ್ಲವೆಂದು ತಮಟೆ ಬಡಿಯುವವನ ಮನೆಗೆ ಒಕ್ಕಲಿಗರು ನುಗ್ಗಿ ಅವನನ್ನು ಎಳತಂದು ತಮಟೆ ಬಡಿಸಿದರು. ಈ ಗಲಾಟೆಯಲ್ಲಿ ಅವನ ಗುಡಿಸಲು ಜಖಂ ಆಗಿತ್ತು. ತಮಟೆ ಬಡಿಯುವವನು ಸರಿಯಾಗಿ ಬಡಿಯದಿದ್ದರೆ ಬೀರಪ್ಪನ ಪೂಜಾರಿ ಬೆತ್ತದ ಕೋಲಿನಿಂದ ಮೈಮೇಲೆ ಚಿತ್ರ ಮೂಡಿಸುತ್ತಾನೆ. ಹೋದವರ್ಷ ಮಂಡ್ಯ ಜಿಲ್ಲೆಯ ಬಿದರಕೆರೆಯಲ್ಲಿ ಪತ್ತಿಡಿಯುವ ಅಗಸರ ಭೈರಣ್ಣನಿಗೂ, ತಮಟೆ ಬಡಿಯುವ ಗೆಂಡೆಗೂ, ಬಾರಿಸಿದ್ದ ಬಾಸುಂಡೆ ಮಾಯಲು ಬಹಳ ಹೆಣಗಬೇಕಾಯಿತು. ಭೀರಪ್ಪನೇ ಹೊಡೆದ ದೇವರ ಕೈಯಲ್ಲಿ ಏಟು ತಿನ್ನಲು ಪುಣ್ಯಮಾಡಿರಬೇಕು" ಎಂದು ತಿಳಿದುಕೊಂಡು ಈ ಗಾಯಾಳುಗಳು ಸುಮ್ಮನಾಗುತ್ತಾರೆ. ಇನ್ನು ಮಂಡ್ಯ ಜಿಲ್ಲೆಯ ತುಪ್ಪದ ಮಡು, ದೊಡ್ಡಬಾಲ, ಆರ

ಚಂದ್ರೇಗೌಡ ಅಜ್ಜಂಪುರ

ಕೆರೆ, ಮುಂತಾದ ಕುರುಬರ ಬೀರಪ್ಪನಿರುವ ಊರಲ್ಲಿ ಈ ಹರಿಜನರಂತು ಮನುಷ್ಯರಾಗಿ ಬಾಳುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ಈ ತಮಟೆ.

ಮಂಡ್ಯ ಜಿಲ್ಲೆಯ ಬಿದರಕೆರೆಯಲ್ಲಿ ತಮಟೆ ಬಡಿಯುವುದಿಲ್ಲವೆಂದು ಹಟಮಾಡಿದ ಮಾಯ್ಗಣ್ಣ ಊರು ವರ್ಷ ಹಬ್ಬ ನಿಲ್ಲಿಸಿದ್ದ. ಒಂದು ಹಬ್ಬ ನಡೆಯಲು ತಮಟೆ ಬಡಿಯುವವನೇ ಮುಖ್ಯ ಕಾರಣ ಎಂದು ಆ ಊರಿನ ಜನಕ್ಕೆ ಕೊನೆಗೂ ಹೊಳೆಯಲಿಲ್ಲ. ಇದೇ ಊರಿಗೂ ಪಕ್ಕದ ಊರಾದ ಬಲ್ಲಾವಳ್ಳಿಗೂ ಒಬ್ಬ ತಮಟೆ ಬಡಿಯುವವನ ಸಲುವಾಗಿ ಜಗಳವಾಗಿ ಕೊನೆಗೆ ಹೊಡೆತ ತಿಂದವನು ತಮಟೆ ಬಡಿಯುವ ನಿಂಗ. ಅವನು ಈ ರಾಕ್ಷಸರ ಹೀನಾಯವಾದ ನಡತೆಯಿಂದ ತಪ್ಪಿಸಿಕೊಳ್ಳಲು ಕೆಮ್ಮಣ್ಣುಗುಂಡಿಗೆ ಹೋಗಿ ಬಿಟ್ಟ. ಅಲ್ಲೆಲ್ಲ ಕೂಲಿನಾಲಿ ಮಾಡಿ ಜೀವಿಸಿ ದೇಶ ತಿರುಗಿ ಬಂದ. ಈಗ ಮತ್ತೆ ಅದೇ ತಮಟೆ ಹೆಗಲಿಗೆ ನೇತು ಬಿದ್ದಿದೆ.

ಮಂಡ್ಯ ಜಿಲ್ಲೆಯ ಲಾಳನ ಕೆರೆಯಲ್ಲಿ ಹೀಗೆ ಹರಿಜನನೊಬ್ಬ ಆ ಊರಿನ ದೇವರಿಗೆ ತಮಟೆ ಬಡಿಯುವುದಿಲ್ಲವೆಂದು ಹಟ ಮಾಡಿದ. ಕಾಕತಾಳೀಯವೆಂಬತೆ ಕೆಲವಾರು ದಿವಸಗಳ ನಂತರ ಅವನ ಕೈಊದಿಕೊಂಡಿತು. ಊರಜನ ಇದನ್ನು ದೇವರ ಶಿಕ್ಷೆ ಎಂದು ಹೆದರಿಸಿದರು. ಈಗ ಎಷ್ಟೇ ಕಷ್ಟ ಬಂದರೂ ತಮಟೆ ಬಡಿಯಬೇಕಾಗಿದೆ.

ಈ ತಮಟೆ ದನದ್ದೋ ಎಮ್ಮೆಯದ್ದೋ ಚರ್ಮದ್ದು ಎಂದು ಅಸಹ್ಯವಾಗಿ ನೋಡುವ ಜನ ಅದನ್ನು, ಕತ್ತಿಗೆ ನೇತಾಕಿಕೊಂಡವನನ್ನು, ಬೇರೆಬೇರೆಯಾಗಿ ನೋಡುವುದಿಲ್ಲ. ಅದೊಂದು "ವಾದ್ಯ" ಇವನೊಬ್ಬ "ಕಲಾವಿದ" ಎಂಬ ಬಾವನೆ ಸಗಣಿ ತುಂಬಿದ ನಮ್ಮ ತಲೆಗೆ ಹೊಳೆಯಲು ಇನ್ನೂ ಶತಮಾನಗಳು ಉರುಳಬೇಕು. ಅದಕ್ಕಾಗಿ ಕಾಯುವುದು ಬೇಡ. ಅದನ್ನು ಈಗಲೆ ತೆಗೆದು ಹೊಗೆಯಬೇಕು.

ಇದೊಂದು ಜಟಿಲವಾದಆರ್ಥಿಕ ಸಂಬಂಧವಾದ ಸಮಸ್ಯೆ.

ಕೆಲವು ಊರುಗಳಲ್ಲಿ ಹಬ್ಬವಾದ ನಂತರ ತಮಟೆ ಒಡಿದವನಿಗೆ ರಾಗಿ ಕೊಡುತ್ತಾರೆ. ಕೆಲವರು ಹೆಂಡ ಕುಡಿಸಿ ಕೈಬಿಡುತ್ತಾರೆ. "ತಮಟೆ ನಿನ್ನನ್ನು ಈ ಕೀಳು ಸ್ಥಿತಿಗೆ ತಂದಿದೆ ಬಡಿಯುವುದಿಲ್ಲ ಎಂದು ಹಟಮಾಡಿ ಹಬ್ಬದ ಸಮಯಕ್ಕೆ ಊರು ಬಿಟ್ಟು ಹೋಗು" ಎಂದು ನಾನೊಬ್ಬನಿಗೆ ಹೇಳಿದೆ. ಅದಕ್ಕವನು, "ಹಬ್ಬಾದ ಮ್ಯಾಲೆ ಸಿಕ್ಕೋ ಅರವತ್ತು ಸೇರು ರಾಗಿ ನೀನೆಕೊಡು, ಬುಡ್ತಿನಿ" ಎಂದ. ನಾನು ನಿರುತ್ತರನಾದೆ. ಈ ರೀತಿ ಇಕ್ಕಟ್ಟಿಗೆ ಸಿಕ್ಕಿರುವವರನ್ನು ಏನೂ ಮಾಡಲಾರದವರಾಗಿದ್ದೇವೆ. ಹಾಗೂ ತಮಟೆ ಬಡಿಯುವುದಿಲ್ಲ ಎಂದಾಗಲೆಲ್ಲ ಇವರ ಮೇಲೆ ಆಗಾಗ್ಗೆ ದೌರ್ಜನ್ಯ ನಡೆಯುತ್ತಲೇ ಇವೆ. ಇವರ ಸಹಾಯಕ್ಕಂತೂ ಯಾರೂ ಇಲ್ಲ, ಇನ್ನು ಮುಂದಾದರು ಆಯಾ ತಾಲ್ಲೋಕಿನ ದಲಿತ ಸಂಘರ್ಷ ಸಮಿತಿಯವರು ಇವರನ್ನು ಗುರುತಿಸಿ ಇವರ ರಕ್ಷಣೆಗೆ ಬರಬೇಕು. ಹರಿಜನರು ತಮಟೆ ಬಡಿದೇ ಬಡಿಯುತ್ತೇವೆ ಎಂದು ಹಟ ಹಿಡಿದರೆ, ಅದಕ್ಕೊಂದು ಗೊತ್ತಾದ ಸಂಭಾವನೆ ಹಾಗು ಸಮಯವನ್ನು ನಿಗದಿ ಮಾಡಬೇಕು. ಇಷ್ಟೆಲ್ಲಾ ರಂಪದಲ್ಲೂ ಕೀಳು ಬಾವನೆ ಮೃಗೀಯ ವರ್ತನೆ ಮುಂದುವರಿಯುತ್ತವೆ.

ಒಂದು ವಾದ್ಯವಿಲ್ಲದ ಉತ್ಸವ ಸ್ಮಶಾನ ಯಾತ್ರೆಯಂತೆ. ತಮಟೆ ಇಲ್ಲದಿದ್ದರೆ ಈ ಜನಗಳು ಕುಣಿಯಲು ಸಾಧ್ಯವೇ ಇಲ್ಲ. ವಾಲಗವಿಲ್ಲ

ದ ಮದುವೆ ಪ್ರಾಣಿಗಳ ಮದುವೆಯಂತಾಗುತ್ತದೆ. ಈ ವಾದ್ಯ ನುಡಿಸುವ ಜನರನ್ನು ಹೇಗೆ ನಡೆಸಿಕೊಳ್ಳುತ್ತಿದ್ದಾರೆ? ಮತ್ತು ಎಲ್ಲಿ ಕೂರಿಸುತ್ತಿದ್ದಾರೆ? ಇದು ನಮ್ಮ ಜನಗಳಿಗೆ ಖಂಡಿತ ಅರ್ಥವಾಗುವುದಿಲ್ಲ. ಅವರು ಅರ್ಥಮಾಡಿಕೊಳ್ಳುತ್ತಾರೆಂದು ಕಾಯುವುದು ಬೇಡ. ಇದನ್ನು ಸ್ತಬ್ಧಗೊಳಿಸಿದರೆ ಅದರ ಮಹತ್ವ ಗೊತ್ತಾಗುತ್ತದೆ.

ತಬಲ, ಮೃದಂಗ ಡೋಲು, ಇತ್ಯಾದಿ ವಾದ್ಯಗಳು ಹಾಗು ಅವನ್ನು ನುಡಿಸುವವರನ್ನು ಈ ಜಾತೀಭೂತದ ವ್ಯವಸ್ಥೆಯಲ್ಲಿ ಒಂದು ಎತ್ತರದ ಸ್ಥಾನದಲ್ಲಿ ಗುರುತಿಸುತ್ತಾರೆ. ಹಾಗೆಯೇ ತಮಟೆಯನ್ನು ಅದರ ಆಕಾರ ಶಬ್ದ ಅವನ್ನು ಬಡಿಯುವವನನ್ನು ಕೀಳು ಸ್ಥಾನದಲ್ಲಿ ಗುರುತಿಸುತ್ತವೆ. ಅದನ್ನು ಹೆಗಲಿಗೆ ನೇತಾಕಿಕೊಂಡು ಬಡಿದೇ ಸಮಾನತೆಗೆ ಒಳಗಾಗುತ್ತೇನೆ ಎಂಬುದು ಸುಳ್ಳು. ಅದೊಂದು ಇತರ ಕಲೆಗಳಂತೆ ಗೌರವಿಸಬೇಕಾದ ಕಲೆಯೆಂದು ಈ ಜನ ಪರಿಗಣಿಸುವುದಿಲ್ಲ. ಬದಲಾಗಿ ಅದನ್ನು ಕರ್ಮದ ಕೀಳು ಸಂಕೇತವಾಗಿ ಈಜನ ಕಾಣುತ್ತಾರೆ. ಅಂತದ್ದನ್ನು ಏಕೆ ನೇತಾಕಿಕೊಳ್ಳಬೇಕು? ಈ ತಮಟೆಗಳೇ ಎಷ್ಟೋ ಜೀವಗಳನ್ನು ಬಲಿ ತೆಗೆದುಕೊಂಡಿವೆ ಎಂಬುದನ್ನು ಮರೆಯಬಾರದು.

ಹರಿಜನರು ನೂರಾರು ದೇವರ ಹಿಡಿತಕ್ಕೆ ಸಿಕ್ಕು ಕುತ್ತಿಗೆಗೆ ತಮಟೆಯನ್ನು ನೇತಾಕಿಕೊಂಡು ನರಳುತ್ತಿದ್ದಾರೆ. ಅವರನ್ನು ಗುರುತಿಸಿ ಆ ತಮಟೆ ಕಿತ್ತು ಬಿಸಾಡದಿದ್ದರೆ ಇನ್ನೆಷ್ಟೋ ಶತಮಾನಗಳು ಅವರು ಹಾಗೆಯೇ 'ಇದು ದೇವರ ಕೆಲಸ ಇದು ನಮ್ಮ ಕರ್ಮ' ಎಂದು 'ಸುಮ್ಮನೆ ಬಡಿಯುತ್ತಿರುತ್ತಾರೆ. —

ಶಾಸಕ ಆರ್ಮುಗಂಗೆ ಎಂ.ಡಿ.ಗಂಗಯ್ಯ ಎಚ್ಚರಿಕೆ

ಶಾಸಕ ಅರ್ಮುಗಂ ಇಡಿ ದಲಿತರ ಪಾಲಿಗೆ ಮುಳ್ಳಾಗುವ ಮುನ್ನ, ಇವನ ಮತ್ತು ಇವನ ಬೆಂಬಲಿಗರ ಗುಂಡಾ ವರ್ತನೆಯನ್ನು ದಲಿತ ನಾಯಕರು ಸಾರ್ವಜನಿಕರು ಸಾಮೂಹಿಕವಾಗಿ ಖಂಡಿಸಬೇಕೆಂದು ದಲಿತ ಸಂಘರ್ಷಸಮಿತಿ ರಾಜ್ಯ ಸಂಚಾಲಕ ಎಂ.ಡಿ. ಗಂಗಯ್ಯ ಮನವಿ ಮಾಡಿರುವರು.

ಇನ್ನು ಮುಂದೆ ಅರ್ಮುಗಂ ಗುಂಡಾಗಿರಿ ನಿಲ್ಲಿಸಿ, ಬೇಷರತ್ತಾಗಿ ಕ್ಷಮೆ ಯಾಚಿಸದಿದ್ದರೆ ಇವನ ವಿರುದ್ಧ ರಾಜೀನಾಮೆಗಾಗಿ ರಾಜ್ಯದಾದ್ಯಂತ ಚಳುವಳಿ ಮಾಡುವುದು ಅನಿವಾರ್ಯ ಎಂದು ಎಚ್ಚರಿಕೆ ನೀಡಿದ್ದಾರೆ. —

ದಲಿತರ ಕೊಲೆಗಳಿಗೆ ಸಂಬಂಧಪಟ್ಟಂತೆ ದಲಿತ ಮಂತ್ರಿ ಶಾಸಕರ ಕಣ್ಣು ತೆರೆಸುವ ಸಲುವಾಗಿ ದಲಿತ ಸಂಘರ್ಷ ಸಮಿತಿಯು ಕರ್ನಾಟಕಾದ್ಯಂತ ದಲಿತ ಮಂತ್ರಿ ಶಾಸಕರ ಮನೆಗಳ ಮುಂದೆ ಧರಣಿ ಸತ್ಯಾಗ್ರಹ ನಡೆಸಿದಾಗ "ನಾವು ಕಣ್ಣು ತೆರೆಯುವುದಿಲ್ಲ"ಎಂದು ಹಠ ಮಾಡಿ ಡಿ.ಎಸ್.ಎಸ್ ಕಾರ್ಯಕರ್ತರ ಮೇಲೆ ಆರ್ಮುಗಂ ಮತ್ತು ಪ್ರಸಾದರು ಹಲ್ಲೆ ನಡೆಸಿ ಜನರಿಂದ ಉಗಿಸಿಕೊಳ್ಳುತ್ತಾ ಅದರ ಪ್ರತಿಫಲ ಉಣ್ಣುತ್ತಿದ್ದಾರೆ. ಜನರ ಉಗುಳಿಗೂ ಕಣ್ಣು ತೆರೆಯದ ಆರ್ಮುಗಂ (ಟೈಗರ್ !) ಸಾಹೇಬರು ತಮ್ಮ ತಲೆಹಿಡುಕ ರಾಜಕೀಯದಿಂದ ಸಂಪಾದಿಸಿದ ದುಡ್ಡನ್ನೆಲ್ಲ ಮತ್ತಷ್ಟು ಚಾಕುಚೈನು ಕೊಳ್ಳಲು ಸುರಿಯುತ್ತಿದ್ದಾರೆ. ತಮ್ಮ ಹುಲಿವೇಶದ ಹೆಗ್ಗಣ ರೂಪವನ್ನು ಬಯಲು ಮಾಡಿದ ಪ್ರಜಾವಾಣಿ ಪತ್ರಿಕೆ ವಿರುದ್ಧ ಯುದ್ಧ ಸಾರಿರುವ ಈ ಮೂರ್ಖ ರಾಜಕಾರಣಿ ತನ್ನ ಕೆದರಿದ ತಲೆಗೆ ಸರಿಯಾಗಿ ದೂಳು ಎರಚಿಕೊಳ್ಳುತ್ತಿದ್ದಾರೆ.

ಡಿ. ಎಸ್. ಎಸ್. ಕಾರ್ಯಕರ್ತರ ಮೇಲೆ ಕೈಮಾಡಿದ, ಆರ್ಮುಗಂ ಮತ್ತು ಶ್ರೀನಿವಾಸಪ್ರಸಾದರ ಮೂರ್ಖತನಕ್ಕೆ ನಕ್ಕು ದಲಿತ ಸಂಘರ್ಷ ಸಮಿತಿಯ ಮೈಸೂರು ಶಾಖೆ ಹೊರಾಡಿಸಿದ ಒಂದು ಕರಪತ್ರ :

ಆರ್ಮುಗಂ ಶ್ರೀನಿವಾಸ್‌ಪ್ರಸಾದ್‌ಗೆ ತಾಕತ್ತಿದ್ದರೆ....

ಮಾನ್ಯರೆ,

1973ರಿಂದ ಈಚೆಗೆ ಇಂಡಿಯಾದ ತುಂಬಾ 40 ಸಾವಿರಕ್ಕೂಮೀರಿ ಹರಿಜನಗಿರಿಜನರಮೇಲೆ ಹಲ್ಲೆ, ಕಗ್ಗೊಲೆಗಳಾಗಿವೆ ಎನ್ನುವುದೂ, ದೇವೋಲಿ ಸಾಧುಪುರ ಕೆಸತಾರಗಳಲ್ಲಿ ಹರಿಜನರ ಹೆಣಗಳು ಬೀದಿಗಳಲ್ಲಿ ಚೆಲ್ಲಾಡಿವೆ ಎನ್ನುವುದೂ ಈದೇಶದ ಎಲ್ಲ ಎಂ.ಎಲ್.ಎ ಎಂ.ಪಿ. ಮಿನಿಸ್ಟರುಗಳ ಮುಖಕ್ಕೆ ಎಕ್ಕಡದಲ್ಲಿ ಹೊಡೆದಂತಿರುವ ಸತ್ಯಾಂಶ.ಮತ್ತು ಹರಿಜನ-ಗಿರಿಜನರ ಹೆಣಗಳನ್ನು ತನ್ನ ಮಡಿಲಲ್ಲಿ ತುಂಬಿಕೊಂಡು ಬೆಕ್ಕಿನಂತೆ ಕಣ್ಣುಮುಚ್ಚಿ ಹಾಲು ಕುಡಿಯುತ್ತಿರುವ ಪ್ರಧಾನಿ ಇಂದಿರಾಗಾಂಧಿ ದೇಶವೆಲ್ಲ ಸುತ್ತುತ್ತಾ ದಲಿತೋದ್ಧಾರ ಹೇಳುತ್ತಿರುವುದು ಈ ದೇಶದ ದಲಿತರೆಲ್ಲರ ಎದೆಗೆ ಚೂರಿ ಇರಿದಂತೆ ಇರುವ ಸತ್ಯಾಂಶ.

ಇಂಥ ಕಟು ಸತ್ಯಗಳನ್ನೆಲ್ಲ ಕಣ್ಣುಮುಂದಿಟ್ಟುಕೊಂಡೂ ದಲಿತರ ಕಗ್ಗೊಲೆಗಳಿಗೆ ಮೌನತಾಳಿರುವ ಬೇಜವಾಬ್ದಾರಿ ದಲಿತ ಮಂತ್ರಿ ಶಾಸಕರೇ ದೇವೋಲಿ ಸಾಧುಪುರ ಕೆಸತಾರ ಇತ್ಯಾದಿ ಹಬ್ಬುತ್ತಿರುವ ಕಗ್ಗೊಲೆಗಳಿಗೆ ವಾಬ್ದಾರರು ಎನ್ನುವುದನ್ನು ಯಾತನೆಯಿಂದ ಹೇಳುತ್ತಾ, ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಫೆ.27 ರ ಶನಿವಾರದಂದು ರಾಜ್ಯಾದ್ಯಂತ ದಲಿತ ಮಂತ್ರಿ ಶಾಸಕರ ಮನೆಗಳ ಮುಂದೆ ಧರಣಿ ಸತ್ಯಾಗ್ರಹ ನಡೆಸಿರುವುದು ಮಹಾ ಜನಗಳಿಗೆಲ್ಲ ಗೊತ್ತಾಗಿದೆ. ಆದರೆ ನಮ್ಮ ಮೂರ್ಖ ದಲಿತ ಮಂತ್ರಿ ಶಾಸಕರಿಗೆ ನೊಂದು ಬೆಂದ ದಲಿತರ ಭಾವನೆಗಳು ಅರ್ಥವಾದಂತೆ ಕಾಣುತ್ತಿಲ್ಲ. ಜೂನಿಯರ್ ಅಂಬೇಡ್ಕರ್ ಎಂದು ಹೇಳಿಕೊಳ್ಳುವ ಆರ್ಮುಗಂ ಅವರು ಕೆ.ಜಿ.ಎಫ್‌ನಲ್ಲಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರಿಗೆ ಚಾಕುಚೈನುಗಳಿಂದ ಹೊಡೆದು ಬಾಯಿ ಮುಚ್ಚಿಸುವ ದುರಾಂಕಾರ ತೋರಿದ್ದಾರೆ. ಇನ್ನೊಂದು ಕಡೆ ನಮ್ಮ ಮೈಸೂರಿನ ಕಾಂಗ್ರೆ ಎಂ.ಪಿ.ಶ್ರೀನಿವಾಸಪ್ರಸಾದರು ಶಾಂತಿಯುತವಾಗಿ ಧರಣಿ ಮಾಡುತ್ತಿದ್ದ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲೆ ಅಮಾನುಷವಾಗಿ ಹಲ್ಲೆ ಮಾಡಿದ್ದಾರೆ.

ಆರ್ಮುಗಂ, ಶ್ರೀನಿವಾಸಪ್ರಸಾದರಿಗೆ ಈ ಮೂಲಕ ನಾವು ಹೇಳಬೇಕಾಗಿರುವುದು ಇಷ್ಟು : ನಿಮಗೆ ತಾಕತ್ತಿದ್ದರೆ, ದಲಿತ ಬಂಧುಗಳನ್ನು ಕೊಲೆ ಮಾಡಿರುವ ಮೇಲ್ಜಾತಿಯ ಕೊಲೆಗಾರರ ವಿರುದ್ಧ ಆ ತಾಕತ್ತನ್ನು ತೋರಿಸಿರಿ. ಅಸೆಂಬ್ಲಿ ಪಾರ್ಲಿಮೆಂಟಿನ ಎದುರು ಕಗ್ಗೊಲೆಗಳನ್ನು ಪ್ರತಿಭಟಿಸಿ ಸತ್ಯಾಗ್ರಹ ಹೂಡಿರಿ, ಆಗ ನಾವೂ ನಿಮ್ಮನ್ನು ಬೆಂಬಲಿಸುತ್ತೇವೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ
ಮೈಸೂರು ಶಾಖೆ

ದಲಿತರ ಕಣ್ಣು ತೆರೆಸಿದ ಜೋತಿಬಾಫೂಲೆ

ವಿಶೇಷ ಲೇಖನ

ತೇಜಸ್ವಿ ಕಟ್ಟೀಮನಿ

ಭೀಮರಾವ ಅಂಬೇಡ್ಕರರಂಥ ದಲಿತ ಸಮಾಜ ವಿಜ್ಞಾನಿಯನ್ನು ಇಂಡಿಯಾಕ್ಕೆ ಕೊಟ್ಟ ಮಹಾರಾಷ್ಟ್ರವು, ಅಂಬೇಡ್ಕರರಿಗಿಂತ ಮೊದಲೇ 'ಜೋತಿಬಾಫೂಲೆ'-ಯಂಥ ಎಂಟೆದೆಯ ದಲಿತನನ್ನು ಕೊಟ್ಟಿದೆ.

ದಲಿತರ ಸಂದರ್ಭದಲ್ಲಿ ಮಹಾರಾಷ್ಟ್ರದ 'ಪೇಶ್ವೆ' ಮನೆತನದ ಆಳಿಕೆಯು ಐತಿಹಾಸಿಕ ಬರ್ಬರತೆಯ ಅತ್ಯಂತ ಉಚ್ಚಾಯ ಪಸ್ಥಿಯ ಘಟ್ಟವಾಗಿದೆ. ಮನುಸ್ಮೃತಿಯ ಎಲ್ಲ ದಂಡ ಸಂಹಿತೆಗಳ ಪಾಲನೆ 'ಪೇಶ್ವೆ'ಕಾಲದಲ್ಲಿ ಚಾಚೂ ತಪ್ಪದೆ ಆಗುತ್ತಿತ್ತು.

ಇಂಥ 'ಪೇಶ್ವೆ'ಯ ಆಳಿಕೆ ಕೊನೆಗೊಂಡ ಕೇವಲ ಒಂಬತ್ತು ವರ್ಷಗಳ ನಂತರ ಕ್ರಿ.ಶ. 1827ರಲ್ಲಿ ಜೋತಿ ಬಾಫೂಲೆ ಹುಟ್ಟಿದರು. ಆ ಕಾಲದಲ್ಲಿ ಅವರ ತಂದೆ ಪುಣೆಯಲ್ಲಿದ್ದರು. ಎಲ್ಲ ಅಸ್ಪೃಶ್ಯರಂತೆ ಅವರ ತಂದೆ ಕೂಡ ಅನಕ್ಷರಸ್ಥರಿದ್ದರೂ, ಮಗನನ್ನು ಓದಿಸಬೇಕೆಂಬ ಹಂಬಲ ಅವರಲ್ಲಿತ್ತು. ಅಲ್ಲದೆ ಅವರು ಹೂವಿನ ವ್ಯಾಪಾರದಲ್ಲೂ ನಿಪುಣರಿದ್ದರು. ಅವರ ಕುಶಲತೆಯ ಸುದ್ದಿ 'ಪೇಶ್ವೆ'ಯ ತನಕ ಹೋಯಿತು. ಪೇಶ್ವೆಗಾಗಿ ಹೂವಿನ ಹಾಸಿಗೆಗಳನ್ನು ತಯಾರಿಸುವ ಸಂದರ್ಭ ಫೂಲೆಯವರ ತಂದೆಗೆ ಒದಗಿಬಂದಿತು. 'ಪೇಶ್ವೆ'ಯು ಅವರ ಈ ನಿಪುಣತೆಯಿಂದ ಖುಶಿಗೊಂಡು 36 ಎಕರೆ ಭೂಮಿಯನ್ನು ದಾನ ಮಾಡಿದನು. ಆ ಭೂಮಿಯನ್ನು ಇಂದಿಗೂ ಫೂಲೆ ಅವರ ವಂಶಸ್ಥರು (ಪುಣೆ ಸರ್ವೆ ನಂ-39,40, 41.42) ಉಣ್ಣುತ್ತಿದ್ದಾರೆ. ಹೂವಿನ ವ್ಯವಹಾರದಲ್ಲಿಯ ಕುಶಲತೆಯಿಂದಾಗಿ ಅವರ ಮೊದಲಿನ ಅಡ್ಡ ಹೆಸರಾದ 'ಗೋರೆ' ಸಾವಕಾಶವಾಗಿ ಕಣ್ಮರೆಯಾಗುತ್ತ 'ಫೂಲೆ' ಎಂದೇ ಜನ ಅವರನ್ನು ಕರೆಯಹತ್ತಿದರು.

ತೀರಾ ಸಹಜವಾಗಿ ನಡೆದ ಫೂಲೆ ಅವರ ಬದುಕಿನಲ್ಲಿ ಘಟಿಸಿದ ಒಂದು ಘಟನೆ ಅವರ ಬದುಕಿನ ದಿಕ್ಕನ್ನೇ ಬದಲಾಯಿಸಿತು. ಬಾಲಕ ಫೂಲೆ ಒಂದು ಮದುವೆಯ ದಿಬ್ಬಣದ ಜೊತೆ ನಡೆದಿದ್ದರು. ಒಬ್ಬ ಅಸ್ಪೃಶ್ಯ ಹುಡುಗ ತಮ್ಮ ಹೆಗಲಿಗೆ ಹೆಗಲು ಕೊಟ್ಟು ನಡೆಯಹತ್ತಿದ್ದಾನೆಂದು ಹಾರುವರಿಗೆ ಗೊತ್ತಾದ ತಕ್ಷಣ ಅವರ ಮೈ ಉರಿದೆದ್ದಿತು. ಅವರು ಕಾಲ ಕೆಟ್ಟುಹೋಯಿತೆಂದು ಕೂಗಾಡಿದರು. ಬಾಲಕ ಫೂಲೆಯ ಅಂಗಿಯ ಕಾಲರ ಹಿಡಿದು ಕುನ್ನಿಯನ್ನು ತೂಗಿಸಿ ದೂರ ಒಗೆಯುವಂತೆ ದಿಬ್ಬಣದಿಂದ ಹೊರದಬ್ಬಿದರು. ಇಂಗ್ರೇಜರ ಆಳಿಕೆಯಲ್ಲಿ ಇಂಥವರು ಕೂಡಾ ದೊಡ್ಡ ನವಾಬರೆಂದು ತಮ್ಮಷ್ಟಕ್ಕೆ ತಾವು ತಿಳಿದುಕೊಂಡಿದ್ದಾರೆಂದು ಹೀಯಾಳಿಸಿದರು. ಬಾಲಕ 'ಫೂಲೆ' ಅಳು ನುಂಗಿಕೊಂಡು ಧೂಳಾದ ಕೂದಲನ್ನು ಕೂಡಾ ಝಾಡಿಸಿಕೊಳ್ಳದೆ ಯಾಕೆ ಈ ಜನ ನನ್ನನ್ನು ದಿಬ್ಬಣದೊಳಕ್ಕೆ ಸೇರಿಸುತ್ತಿಲ್ಲ ಎಂದು ವಿಚಾರಿಸಹತ್ತಿದ.

ಈ ರೀತಿ ಅಪಮಾನಗೊಂಡ ಹುಡುಗನೇ ಮುಂದೆ ಅವರ ಪರಂಪರೆಯ, ಸನಾತನ ಹಿಂದೂಧರ್ಮದ ಗೊಡ್ಡು ನಂಬಿಕೆಗಳ ಕಬ್ಬಾಗಿಲುಗಳನ್ನು ಮುಚ್ಚಿಕೊಂಡ ಬ್ರಾಹ್ಮಣ ಮಹಾರಾಜ್ಯವನ್ನು ಬುಡಮೇಲು ಮಾಡುವನೆಂದು ಅವರಿಗೆ ಕ್ಷಣಕೂಡಾ ಅನ್ನಿಸಿರಲಿಲ್ಲ.

ಇದೇ ಹುಡುಗ ಜ್ಞಾನದ ಎಲ್ಲ ಬಾಗಿಲುಗಳ
ಎಲ್ಲರಿಗಾಗಿ, ಹಸಿವಿರುವ ಪ್ರತಿಯೊಬ್ಬ ಜ
ಗಾಗಿ ಬಲಪೂರ್ವಕ ತೆರೆದು, ಅವರು ಮರೆ
ಲಾರದ 'ಶಾಕ್' ಕೊಡುವನೆಂದು ಅ
ಕನಸಿನಲ್ಲೂ ಎಣಿಸಿರಲಿಲ್ಲ.

ಜೋತಿಬಾ ಈ ಅಪಮಾನವನ್ನು ಸ
ದಾದರು. ಎಲ್ಲರೂ ದೇವರ ಮಕ್ಕಳಾ
ಈ ರಾಕ್ಷಸರ 'ಹೃದಯದ ಮನುಷ್ಯರಂತ
ಮಾಡುತ್ತಿರುವುದೇನು? ಎಂದು ಅ
ಮನಸ್ಸು ಸಿಡಿಮಿಡಿಗುಡುತ್ತಿತ್ತು. ಮನು
ಮನುಷ್ಯನ ನಡುವೆ ಯಾಕೆ ಈ ಅಂತ
ಅವರು ಹಗಲೂ ರಾತ್ರಿ ವಿಚಾರಮಾಡಿದ
ಆಳವಾಗಿ ಅಭ್ಯಸಿಸುತ್ತ ಹೋದ ಹ
ಬ್ರಾಹ್ಮಣರು ಈ ಎಲ್ಲ ಧರ್ಮಗ್ರಂಥಗಳ
ಬರೆಯುವುದರ ಮೂಲಕ ಅಸಹಜ ಕಲ್ಪನೆಗ
ಅಸ್ವಾಭಾವಿಕ ದೇವರು ದಿಂಡರುಗಳಿಗೆ, ಅ
ಗಳ ಜೀವವಿರೋಧಿ ಕೃತ್ಯಗಳಿಗೆ ಕುಮ್ಮಕ
ಕೊಟ್ಟಿದ್ದಾರೆ ಎಂದು ಅವರು ಕಂಡುಕೊಂಡರ
ತಮ್ಮ ಸ್ವಾರ್ಥಪ್ರೇರಿತ ಜೀವನವನ್ನು ನ
ಸಲು ಈ ಬ್ರಾಹ್ಮಣರಿಗೆ ಬಡವರ ಬೆವ
ಅತ್ಯವಶ್ಯಕತೆಯಿತ್ತು. ಈ ಬಡವರಲ್ಲಿ ಅಸ್ಪ
ಶ್ಯರ ಬಹುದೊಡ್ಡ ಸಂಖ್ಯೆಯಿದ್ದುದರಿಂ
ಈ ಅಸ್ಪೃಶ್ಯರು ಜ್ಞಾನದ ಭಾಗಿಲ ಸನಿ
ಕೂಡಾ ಹೋಗದಂತೆ ಅನಾದಿಕಾಲದಿಂದಲ
ಸನಾತನ ಧರ್ಮದ ಗುರುಗಳು ತೀರಾ ಜಾ
ತನದ ಸಂಚು ಮಾಡಿರುವುದನ್ನು ಜೋತಿಬ
ತೆರೆದಕಣ್ಣು ಬಿಟ್ಟುಕೊಂಡು ನೋಡಿದರ
ಬ್ರಾಹ್ಮಣರು ಅತೀಂದ್ರಿಯರೇನೂ ಅ
ಅವರೂ ಕೂಡಾ ಎಲ್ಲರಂತೆ ಕೂಳು ತಿನ
ತ್ತಾರೆ, ನೀರು ಕುಡಿಯುತ್ತಾರೆ, ಮೈಥ
ಮಾಡುತ್ತಾರೆ, ಎಲ್ಲರಂತೆ ನಗುತ್ತಾರೆ. ಅ
ತ್ತಾರೆ ಅಂತಾ ಒಂದು. ಕೇವಲ ಒಂದೇ ಒಂ
ಧರ್ಮಗ್ರಂಥದಲ್ಲಿ ಕೂಡಾ ಬರೆದಿಲ್ಲ. ಕೆಲ
ಧರ್ಮಗ್ರಂಥಗಳಲ್ಲಂತೂ ಅವರು ದೇವರಿಗ
ಮೇಲಿನ ಸ್ಥಾನವನ್ನು ಆಕ್ರಮಿಸಿದ್ದಾ
'ಭರುಗ್ವಿಷ್ಣೀಕಥಾ' ದಲ್ಲಿ ಅವರು ದೇವ
ವೇದಗಳನ್ನು ಹುಟ್ಟಿಸಿದನೆಂಬ ಸುಳ್ಳುಸು
ಯನ್ನು ಬರೆದರು. ಈ ಎಲ್ಲ ಸಂಗತಿ
ಹೊಳಹಿನಲ್ಲಿ — ಮನುಷ್ಯರೇ ಅದರಲ್ಲ
ಬ್ರಾಹ್ಮಣರೇ ಈ ಎಲ್ಲ ಭಾನಗಡಿ
ಕರ್ತೃಗಳೆಂದು ಬಾಫೂಲೆಗೆ ಮನವರಿಕೆಯ
ಯಿತು. ವೇದಗಳೂ ಈ ಕ್ಷುದ್ರ ಜೀ
ಳಿಂದಲೇ ಬರೆಯಲ್ಪಟ್ಟಿದ್ದು ವೇದಗಳನ
ದೇವರು ನಿರ್ಮಿಸಿದನೆಂಬ' ಮಾತು ಜನರ

"ಆತ ಹೊಲೇರ ದೇವರು...."

ಗುಲ್ಬರ್ಗಾದ ಜಗತ್ ಸರ್ಕಲ್‌ನಲ್ಲಿ ಎಡ ಬಲಕ್ಕೆ ಸಾಮಾಜಿಕ ಸಮಾನತೆಗಾಗಿ ಒಡೆದಾಡಿದಂಥ ಕ್ರಾಂತಿಕಾರಿ ಬಸವ ಮತ್ತು ಅಂಬೇಡ್ಕರರ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ಇವುಗಳ ನಡುವೆ ಒಂದುದಿನ ಹೆಂಗಸೊಂದು ತನ್ನ ಪುಟಾಣಿ ಮಗುವಿನೊಂದಿಗೆ ನಡೆಯುತ್ತಿದ್ದಾಗ "ನೋಡಪ್ಪ ಮಗು ದೇವರಿಗೆ ನಮಸ್ಕಾರ ಮಾಡಪ್ಪ" ಎಂದು ಆ ಹೆಂಗಸು ತನ್ನ ಮಗುವಿಗೆ ಹೇಳಿತು. ಏನೂ ತಿಳಿಯದ ಎಳೆ ಮಗು ಅಂಬೇಡ್ಕರರ ಪ್ರತಿಮೆಯತ್ತ ನಮಸ್ಕಾರ ಮಾಡಿತು. ಇದ್ದಕ್ಕಿದ್ದಂತೆ ಹಣೆಯ ನರಗಳನ್ನೆಲ್ಲ ಹುಬ್ಬಿಸಿಕೊಂಡ ಆ ಹೆಂಗಸು "ಏ ಕತ್ತೆ ಆತಂಗ್ಯಾಕೆ ನಮಸ್ಕಾರ ಮಾಡ್ತಿ ಆತ ಹೊಲೇರ ದೇವರು, ಬಸವಣ್ಣ ನಮ್ಮ ದೇವರು" ಎಂದು ಬಸವಣ್ಣನ ಪ್ರತಿಮೆಯತ್ತ ಕೈಮಾಡಿದಳು ! ಬಸವಣ್ಣ ಮತ್ತು ಅಂಬೇಡ್ಕರ್ ಇಬ್ಬರೂ ನೋವಿನಿಂದ ನಗುತ್ತಿದ್ದಾರೆ ಎನ್ನಿಸಿತು ನನಗೆ.

—ಸುಳ್ಳದ್ ಸಿದ್ದಪ್ಪಾ

ಕಾಲು ಕಟ್ಟಂಗಿಲ್ಲ ಅಡ್ಡೆ ಹಾಕಂಗಿಲ್ಲ

ಜನಪದ ಕಥೆ

ಜೀನಹಳ್ಳಿ ಸಿದ್ದಲಿಂಗಪ್ಪ

ಹಿಂಗೆ ಕತ್ತಿಗಿ ಅಂತ ನಮ್ಮ ಊರಿನಂಗೆ ಒಂದು ಊರು. ಆ ಊರಾಗೆ ಗೌಡುಂದು ಎತ್ತು ಸತ್ತುತ್ತು. ಸಾಯುತ್ಲು ಮಾದಿಗನಿಗೆ ಸುದ್ದಿ ಹೋತು, ಹೋಗಾಕೆ. ಮಾದಿಗ ಗೌಡನ ಮನೆಗೆ ಹೊತ್ತುಗಂದು ಬರಾಕೆ ಹೋದ.

ಗೌಡುಂದು ಅಲ್ಲಿ ಹನ್ನೆಲ್ಡ್ ಖಂಡುಗದ ರಾಶಿ ಆಗಿತ್ತು. ಮಾದಿಗ ಬರೋದ್ನ ನೋಡಿ ಈ ಸೂಳೆ ಮಗ ರಾಶಿಗೆ ಬರ್ತಾನೆಂದು–ಏನೊ ಒಂದು ತಕ್ಕಲು ಹಾಕಿದ. ಮಾದಿಗ "ಗೌಡ್ರೆ, ಎತ್ತು ಒಯಸ್ಲಾ ? " ಅಂತ ಕೇಳಿದ. ಅದಕ್ಕೆ ಗೌಡ ಅಂದ : "ಎಲೆ ಮರಿಯಾ, ಎತ್ನ ನೀನು ಹೊತ್ತುಗಂಧು ಹೋಗದಾದ್ರೆ–ಎತ್ತ ಕಾಲು ಕಟ್ಟಕೂಡದು ಅಡ್ಡೆಹಾಕಕೂಡದು ಚೂರಿ ಹಾಕಿ ಕೊಯ್ಯಕೂಡದು. ಅದರ ಮಿಣೆ ಮಾಡಿ ಕೊಂಡು ಬರಬೇಕು. ರಾಶಿ ಹೋಕಲೆ ಗಾಡ ತರಬೇಕು" ಅಂತ.

ಆ ಮಿಣೆ ಥ್ಯಂಗೆ ಮಾಡಿಕಂದ ಬರಬೇಕು ? ಅನ್ನೋ ಯೋಚ್ನೆ. ಹತ್ತು ಅವನಿಗೆ. ಮನಿಗೆ ಹೋಗಿ ಮಕ್ಕಂದ. ಅವನ ಹೇಣ್ತಿ ಅಂಗಳ ಹೊಡಿತಿದ್ಲು. "ಯಾಕ್ರಿ ಮಕ್ಕಂದ್ರಿ ? " ಅಂದ್ಲು "ಇಲ್ಲಾ ಕಣೆ ಎತ್ತುಸತ್ತಿತ್ತು ಹನ್ನೆಲ್ಡ್ ಖಂಡುಗದ ರಾಶಿ ಆಕತ್ತಿ, ಕಾಲು ಕಟ್ಟಾಂಗಿಲ್ಲ ಅಡ್ಡೆಹಾಕಂಗಿಲ್ಲ ಚೂರಿ ಹೆಟ್ಟಿ ಕೂಯ್ಯಾಂಗಿಲ್ಲ· ಅದರ ಮಿಣೆ ಮಾಡಿ ತರಬೇಕು. ಹ್ಯಂಗೆ ಮಾಡ್ಲೆ ? " ಅಂತ ಕೇಳಿದ. ಅವನ ಹೇಣ್ತಿ ಹುಚ್ಚುಗಂಡೆ ಏಳು–ಅಂತ ಅಂದ್ಲು. "ಎದ್ದು ಏನು ಮಾಡ್ಲೆ ? " ಅಂದ. "ಆವಾಗ ನೀನು ಹೊಡುದಂಗೆ ಮಾಡು. ನಾನು ಅತ್ತಾಂಗೆ ಮಾಡ್ತನಿ. ಅವಗ ನೀನು ನನ್ನ ಏನು ಮಾಡಿದ್ರೂ ಇಟಗನಾಕೆ ಇಲ್ಲ ಅಂತ ಅನ್ನು. ನಾನೂ ಇರಾಕಿಲ್ಲ ಅಂತನಿ. ಏಟು ಹೇಳಿದ್ರೂ ಕೇಳ ಬ್ಯಾಡ" ಅಂತ ಗಂಡಗೆ ಹೇಳಿಕೊಟ್ಲು. ಹಂಗೆ ಆಗ್ಲಿ ಅಂತ ಹೊಂಟ್ರು.

ಅವಗ ಅವನು ಕಳ್ಳಿ ಬಡಿಗೆ ಹೊತ್ತುಗಂದು ಹೊಂಟ ಅಕ್ಕ ಬಾಯಿ ಬಾಯಿ ಬಡಕಂತ ಹೊಂಟ್ಲು ಗೌಡಕೇಳಿದ, 'ಯಾಕ್ರೆ ಯಾಕ್ರೇ ?' ಅಂತ. "ಅಯ್ಯೊಯ್ಯೋ ಸ್ವಾಮಿ, ಇವಳ್ನ ಇಟಗನಾಕಿಲ್ಲ" ಅಂತ ಅಂದ, ಇಕ್ಕೆ "ನಾ ಇರಾಕಿಲ್ಲ" ಅಂದ್ಲು. ಗೌಡ "ಏನಾಗಬೇಕು ? " ಅಂತ ಕೇಳಿದ. "ಏನಿಲ್ಲ ಸ್ವಾಮಿ ನಾನು ಇರಾಕಿಲ್ಲ ಅನ್ನ ಬಟ್ಟೆಗೆ ಹೊನ್ನಾಳಿಗೆ–ಹೋಕನಿ, ಅರ್ಜಿ ಬರಕೊಡಿ" ಅಂತ ಕೇಳಿದ್ಲು. ಹಿಂಗೆ ವಾಚಾಡಿದ್ರು.

ಒಳಗೆ ದಪ್ತರ ಗಂಟು ಇತ್ತು. ಗೌಡ ಹೇಣ್ತಿಗೆ ಹೇಳಿದ, ತಗಂಬಾ–ಅಂತ. ಹೇಣ್ತಿ ತಂದ್ಲು. ತರತ್ಲು ಮಾದಿಗಿತ್ತಿ "ದಪ್ತರ ಗಂಟು ತರೋದು ಬೇಕಿಲ್ಲ. ಕಾಗದ ಮ್ಯಾಲೆ ಗೆರೆ ಬರೆಯೋದು ಬೇಕಿಲ್ಲ. ಗಾಡ ಅರ್ಜಿ ಕೊಡಿ" ಅಂದ್ಲು, ದುಃಖದಾಗೆ, ಆಗ ಗೌಡ ಅಂದ, "ಅಯ್ಯೋ ಹುಚ್ಚುಮುಂಡೆ ! ದಪ್ತರ ಗಂಟು ಬರತ್ಲು ಕಾಗದ ಮ್ಯಾಲೆ ಗೆರೆ ಬರೆ ಯಾಕೆ ಹೊಂಟತ್ಲು ಇದ್ಹ್ಯಂಗೆ ತಯಾರಾಕತಿ ?" ಅಂತ. ಆಗ ಅಕ್ಕ "ಕಾಲು ಕಟ್ಟದಿತ್ತಿ ಅಡ್ಡೆ ಹಾಕದಿತ್ತಿ ಚೂರಿ ಹಾಕದಿತ್ತಿ ಅದ್ಹ್ಯಂಗೆ ಮಿಣೆ ಆಕತಿ ಗೌಡ್ರೆ ? " ಅಂದ್ಲು. ಅವಾಗ ಎತು ಹೊತ್ತಗಂದು ಹೋಗು ಅಂದ. ಕಾಳು ಹೊತ್ತುಗಂದು ಹೋಗು ಅಂದ ಗೌಡ, ಗೊತ್ತಾಗಿ.

ತಪ್ಪು ದಾರಿಗಳಿದು ದುಡಿಯದೇ ಸುಖಾಸನದ ಮೇಲೆ ಪವಡಿಸುವ ಸುಖದ ನಿರಂತರತೆಯನ್ನು ಕಾಯುವ ಹಸಿಸುಳ್ಳಾಗಿದೆಯೆಂದು ಬಾಫೂಲೆಗೆ ಅನ್ನಿಸಿತು. ಅವರು ಬ್ರಾಹ್ಮಣರನ್ನು ತಡವಲು ನಿರ್ಧರಿಸಿದರು. ಬ್ರಾಹ್ಮಣತ್ವದ ವಿರುದ್ಧದ ಅವರ ಹೋರಾಟವು ಯಾರೂ ಸರಿಗಟ್ಟಲಾರದ್ದಾಗಿತ್ತು. ಬಾಫೂಲೆ ಆಕ್ರಮಣದಿಂದ ಹಾರುವರ ದಂತಗೋಪುರಗಳು ನಿಟಿನ್ನಿಟಿಲೆನ್ನಹತ್ತಿದವು. ಈ ಸಣ್ಣತನದ ಪ್ರತೀಕವಾದ ಬ್ರಾಹ್ಮಣತ್ವದಿಂದ ತಾನೇ ಆರ್ಥಿಕ ಸಾಮಾಜಿಕ ಹಾಗೂ ಧಾರ್ಮಿಕ ಬಿರುಕು ಮನುಷ್ಯ ಮನುಷ್ಯರ ನಡುವೆ ಕಂಡು ಬಂದದ್ದು. ಸತ್ತಿರಲಿ ಅಥವಾ ಹುಟ್ಟಿರಲಿ, ಸುಖದ ಸುಗತಿಯಿರಲಿ ಅಥವಾ ದುಃಖದ್ದೇ ಆಗಿರಲಿ ಹಾರುವರ ಹಾಜರಿ ಅನಿವಾರ್ಯವಾಗಿತ್ತಷ್ಟೇ ಅಲ್ಲ, ಅವರಿಗೆ ಯಾವಾಗಲೂ ಅಗ್ರಪಟ್ಟವನ್ನು ಕಾಯ್ದಿಡಲೇಬೇಕಾಗಿತ್ತು. ಆಶೀರ್ವಾದ ಮಾಡಲು ತುದಿಗಾಲ ಮೇಲೆ ನಿಂತಿರುತ್ತಿದ್ದ ಹಾರುವರು ಸಮಾಜದಲ್ಲಿ ದೇವರ ಸ್ಥಾನವನ್ನು ಆಕ್ರಮಿಸಿದ್ದರು. ಏರಡನೆಯವರ ಬೆವರಿನ ಮೇಲೆ ಬದುಕುವ ಈ ಪರಾವಲಂಬಿ ಜೀವಿಗಳು, ವೇದಗಳ ಮೇಲೆಬದುಕಿಡೀ ಬೊಗಳೆಹೊಡೆಯುವ ಕ್ಷುದ್ರರು ಈ ಭೂಮಿಯ ದೇವರೆಂದು ಕರೆಸಿಗೊಂಡರೆ, ಶ್ರಮದ ಎಲ್ಲ ಸಾಧ್ಯತೆಗಳನ್ನು ಅನುಭವಿಸುವ ರೈತ 'ಹಲಧರ' ಅನ್ನಿಸಿಕೊಂಡನು. ಗ್ರಂಥಗಳ ಅಧ್ಯಯನವನ್ನು ಹಾರುವರು ಬೇರೆಯವರಿಗೆ ನಿಷೇಧಿಸಿದರೆ, ಹಾರುವ ವ್ಯಾಸ ಜನರನ್ನು ಶೋಷಿಸಲು ವೇದಗಳಿಂದ ಬೇರೆಬೇರೆ ಶೃತಿಗಳನ್ನು ಹೊರಡಿಸಿದನು.

ಇಂಥ ಕ್ರೂರ ಪರಿಸರದಲ್ಲಿ ತಮ್ಮ ಶೋಷಣೆಯಾಗುತ್ತಿದೆಯೆಂಬ ಅರಿವು ದಲಿತರಲ್ಲಿ ಇದ್ದಿಲ್ಲ. ಇದ್ದರೂ ಕೂಡಾ ಅನೇಕ ರೀತಿಯ ಒತ್ತಡಗಳ ಮೂಲಕ ಅವರ ಅರಿವು ಕಮರಿ ಹೋಗುತ್ತಿದ್ದ ಸಂದರ್ಭದಲ್ಲಿ ಜೋತಿಬಾ ತಮ್ಮ ಸಮಾನತೆಯ ಕ್ರಿಯೆಗಳಿಂದ ಜನರನ್ನು ಹೊಸ ಹೊಸ ವಿಸ್ಮಯಗಳೆಡೆಗೆ ತಿರುಗಿಸ ತೊಡಗಿದರು. ಪುಸ್ತಕದ ಮೋರೆ ನೋಡದ ಜನಗಳ ಕೈಯಲ್ಲಿ ಪುಸ್ತಕಕೊಟ್ಟರು. ಅವುಗಳಲ್ಲಿ ಏನಿದೆಯೆಂದು ತಿಳಿಹೇಳಿದರು; ಬೇರೆಯವರಿಗೆ ತಿಳಿಸಿಹೇಳಲು ಪ್ರೇರೇಪಿಸಿದರು. ಪಾತಶಾಲೆಗಳಿಂದ ಗಾವುದ ದೂರ ಅಡ್ಡಾಡುತ್ತಿದ್ದವರನ್ನು ಬಾಫೂಲೆಹಿಡಿದು ತಂದು ಕೂರಿಸಿದರು. ಅವರ ವಿಸ್ಮಯಗಳ ಒಂದೊಂದೇ ಪರದೆಯನ್ನು ಜೋತಿಬಾ ತೆರೆಯುತ್ತಾ ಹೋದ ಹಾಗೆ, ದಲಿತರಿಗೆ ಹಾಗೂ ಬ್ರಾಹ್ಮಣೇತರ ಹೆಣ್ಣು ಮಕ್ಕಳಿಗೆ ಧರ್ಮದ, ಮಾನವೀಯತೆಯ ನಿಜವಾದ ಬಣ್ಣಗೊತ್ತಾಗಹತ್ತಿತು. ಹೀಗೆ ಜೋತಿಬಾ ಧಾರ್ಮಿಕ ಬದುಕಿಗೆ ವಿಶಾಲವಾದ ಆಯಾಮವನ್ನು, ಮಾನವೀಯ ಹಕ್ಕುಗಳಿಗೆ ಅಸ್ತಿತ್ವವನ್ನು ಜೊತೆಗೆ ಸಮಾನತೆಯ ಅರಿವನ್ನು ಜನರ ಮನಸ್ಸಿನಲ್ಲಿ ಬಿತ್ತಿದರು. ಅಲ್ಲಿಂದಲೇ ಜನರು ತಮ್ಮ ಬದುಕಿನ ಕಷ್ಟಕೋಟಲೆಗಳ ಮೂಲದ ಬಗೆಗೆ ಜಾಗೃತರಾದರಲ್ಲದೆ, ತಮ್ಮ ಶೋಷಣೆಯನ್ನು ಒಂದು ತಾತ್ವಿಕ ಚೌಕಟ್ಟಿನಲ್ಲಿ ನೋಡಿ ಬಗೆಹರಿಸಲು ಹೆಣಗಾಡತೊಡಗಿದರು.

ಹುಟ್ಟುವಾಗಲೇ ಅತ್ಯಂತ ಪರಿಮಿತ ವಲಯದಲ್ಲಿ ಬೆಳೆದ ಫೂಲೆ ಎಲ್ಲ ಮಿತಿಗಳನ್ನೂ ದಾಟಿ ಮೊಟ್ಟಮೊದಲಿಗೆ ಏನಾದರೂ ಹೊಸದನ್ನು ಮಾಡುವುದರಲ್ಲಿ ಮೊದಲಿಗರಾಗಿದ್ದಾರೆ.

(ಮುಂದುವರಿಯುವುದು)

"ಇಂದಿರಾ ಬಂದರು - ಬಂಧಿಸಿದರು - ಹೋದರು"

1982ರ ಜನವರಿಯಲ್ಲಿ ಚಿಕ್ಕಮಗಳೂರಿಗೆ ಪ್ರಧಾನಿ ಇಂದಿರಾಗಾಂಧಿ ತನ್ನ ಪರಿವಾರದೊಂದಿಗೆ ಬಂದಿದ್ದೇನೋ ನಿಜ. ಆದರೆ ನೀಡಿದ್ದೇನು ? ಹೊಗಳಿಕೆಯ ಹೂ ಮಳೆಗೆರದು "ನನ್ನನ್ನು ನಿಮ್ಮ ಮಗಳಂತೆ ಕಂಡಿದ್ದೀರಿ" ಎಂದು ಭಾವನಾತ್ಮಕವಾಗಿ ಭಾಷಣಬೆಸದರು. ಕೈಬೀಸಿ ವಾಪಸಾದರು,

ಇವರ ಸ್ವಾಗತಕ್ಕೆ ಟೊಂಕಕಟ್ಟಿ ನಿಂತ, ಉಳ್ಳವರ ಚೊಟ್ಟು 'ನೆಕ್ಕುವ ಪೊಲೀಸ್‌ರು ದಲಿತ ಸಂಘರ್ಷ ಸಮಿತಿಯ ಮೂರು ಜನ ಕಾರ್ಯಕರ್ತರನ್ನು ಇತರೆ 9 ಜನ ನಿರಾಪರಾಧಿಗಳನ್ನು ಯಾವ ಮುನ್ಸೂಚನೆಯಿಲ್ಲದೆ ಬಂಧಿಸಿದರು.

ಜನವರಿ 2ರಂದು ಮಧ್ಯ ರಾತ್ರಿ ಚಿಕ್ಕಮಗಳೂರು ಟವನ್ ಠಾಣೆ ಸಬ್‌ಇನ್‌ಸ್ಪೆಕ್ಟರ್ ಬಾಷ ಸಾಹೇಬ್ ಸರ್ಕಲ್ ಇನ್‌ಸ್ಪೆಕ್ಟರ್ ಕಾಂತರಾಜ ಮತ್ತು ಪೋಲೀಸ್‌ರು ಮನೆಗೆ ಬಂದು ಬಾಗಿಲು ತಟ್ಟಿ –ಎಂ.ಡಿ. ಗಂಗಯ್ಯ ರಾಜಣ್ಣ ಎಲ್ಲಿದ್ದಾರೆ ಎಂದು ಕೇಳಲು, ಮನೆಯವರು ಅವರು ಊರಿನಲ್ಲಿ ಇಲ್ಲ ಎಂದು ಹೇಳಿದರೂ ಕೇಳದೆ ಮನೆಯನೆಲ್ಲ ಶೋಧಿಸಿ, ಇಬ್ಬರು ಎಲ್ಲಿದ್ದಾರೆ ಎಂದು ತಿಳಿಸದಿದ್ದರೆ ನಿಮ್ಮನೆಲ್ಲ ಅರೆಸ್ಟ್ ಮಾಡ್ತುತೀವಿ ಎಂದು ಗದರಿಸಿ. ಸಿಕ್ಕ ಮೂರು ಜನರನ್ನು ಬಂದಿಸಿದರು. ಅಲ್ಲದೆ ರಸ್ತೆಯ ಪಕ್ಕದಲ್ಲಿ "ಕೈ ಹಸ್ತದ ಗುರುತು ಇಟ್ಟುಕೊಂಡು ಶಾಸ್ತ್ರ ಹೇಳುತ್ತಿದ್ದ ಒಬ್ಬ ಜ್ಯೋತಿಷ್ಯನನ್ನು, ನೋಡಲು ಬಂದಿದ್ದ ಕೂಲಿ ಹುಡುಗರನ್ನು ಒಟ್ಟು 12 ಜನರನ್ನು ಬಂದಿಸಿ 60 ಮೈಲಿ ದೂರದ ಕೊಪ್ಪ ಪೋಲೀಸ್ ಠಾಣೆಯಲ್ಲಿಟ್ಟರು. ಬಂಧಿತರಾದವರು ಕೊಲೆಗಡುಕರಲ್ಲ. ಯಾವ ರಾಜಕೀಯ ಪಕ್ಷದವರಲ್ಲ, ದರೋಡೆ, ಅತ್ಯಾಚಾರ ಮಾಡಿದವರಲ್ಲ. ಇಂತ ನಿರಪರಾಧಿಗಳನ್ನು ಏಕೆ ಬಂಧಿಸಿದಿರಿ ಎಂದು ಕೇಳಿದರೆ ಜಿಲ್ಲಾ ಪೋಲೀಸ್ ಮುಖ್ಯಧಿಕಾರಿ ಎಸ್. ಎಸ್. ಮುಸಳಿಯವರು ಸರ್ಕಾರದ ಕಾನೂನು, ನಾವೇನ್ರಿ ಮಾಡೋದೋ ಎಂಬ ಉತ್ತರ ಹೇಳಿ ಬೆವರ ತೊಡಗಿದರು.

ಅಸಮರ್ಥ ಸರ್ಕಾರ ಬೆಲ್ಚಿ, ಪಿಪ್ರಾ ಪರಾಸ್ ಬೀಘ, ನಾರಾಯಣಪುರ, ದೇವೋಲಿ ಸಾಧುಪುರಗಳಲ್ಲಿ ನಮ್ಮ ನೂರಾರು ಜನ ದಲಿತರನ್ನು ಕೊಲ್ಲಿಸಿದೆ. ಇವುಗಳು ಕೊಲೆಗಳೇ ಅಲ್ಲ ಎಂದು ತಳ್ಳಿ ಹಾಕುವ ಕೋರ್ಟುಕಛೇರಿಗಳಿದ್ದು ಕೊಲೆಗಡುಕರನ್ನು ಹಿಡಿದು ಶಿಕ್ಷಿಸದ ಪೋಲೀಸರು ದಲಿತರ ದಮನ ಮಾಡುತ್ತಿದ್ದಾರೆ, ಈ ಬಾರಿ ಪ್ರಧಾನಿ ಬೇಟಿಯಿಂದ ಸರ್ಕಾರಕೆ ಲಕ್ಷಾಂತರ ರೂ.ಗಳ ದುಂದುವೆಚ್ಚ. ಪುಢಾರಿಗಳು ಮೆರೆದರು. ಅಧಿಕಾರಿಗಳು ಬೆವರಿದರು. ಶಾಲ ವಿದ್ಯಾರ್ಥಿಗಳು ಬವಳಿದರು. ಮನವಿಗಳಿಗೆ ಮಾನ್ಯತೆಯಿಲ್ಲ. ರಸ್ತೆಗೆ ಡಾಂಬರು, ಪ್ರವಾಸಿ ಮಂದಿರ ಶುದ್ಧ, ರಾತ್ರಿ ರಸ್ತೆಗಳು ಮಿಂಚಿ ಮಾಯವಾದವು, ದಲಿತರ ಬಂಧನ, ಇಷ್ಟೇ ಹೊರತು ಮತ್ತೇನಿಲ್ಲ. ಇಂದಿರಾ ಹಾರಿಬಂದು ಹಾರಿಹೋದರು.

—ಗಂಗಾ

ಹೊಲೇರ ಉಚ್ಚೆ....

ಕಳೆದ ತಿಂಗಳು ಊರಿಗೆ ಹೋಗಿದ್ದಾಗ ನಡೆದ ಒಂದು ಘಟನೆ. ಒಬ್ಬನೇ ಹೋಗುತ್ತಿದ್ದೆ. ರಸ್ತೆಯಲ್ಲಿ ಮೂವರು ಹಳ್ಳಿಯ ಹುಡುಗರು ತಮ್ಮಷ್ಟಕ್ಕೆ ತಾವೇ ಮಾತಾಡುತ್ತಿದ್ದರು. ನಾನು ಅವರ ಮಾತಿಗೆ ಅಡ್ಡ ಬರದೇ, ಅವರ ಮಾತನ್ನು ಗಮನಿಸುತ್ತಿದ್ದೆ. ಒಬ್ಬನು ಇನ್ನೊಬ್ಬನಿಗೆ ಹೇಳಿದ, "ಲೋ ಹೊಸ್ ದನ ತಂದಾಗ ಅದು ಹಾಯಕ್ ಬತ್ತದಲ್ಲಾ, ಅದಕ್ಕೆ ಉಚ್ಚೆ ಹೊಯ್ದು ಹುಲ್ಲಾಕಿದ್ರೆ, ಹಾಯ್ತಲ್ವಂತೆ"

ಮತ್ತೊಬ್ಬ ಅದನ್ನು ಮುಂದುವರಿಸಿದ, "ಹೂಂ...ಕಲಾ. ಅದ್ರಲ್ಲೂ ಹೊಲೇರ ಉಚ್ಚೆ ಆದ್ರೆ ದನ ಕತ್ತೆತ್ತೂ ನೋಡದಿಲ್ಲ. ನಮ್ ಹೊಸ್ ದನ ಅಂಗೇ ಮಾಡ್ತಿತ್ತು. ಆಗ ನಮ್ಮ ಹೊಲೇರ ಬೋರ ಅಂಗೇ ಮಾಡ್‌ದಾ ಕಲಾ......" ಇನ್ನೂ ಮುಂದುವರೆದಿತ್ತು ಅವರ ಮಾತುಗಳು.

ನೊಂದ–ಬೆಂದ 'ಈ' ಜೀವಗಳಿಗೆ ನಮ್ಮ ಈ ಸಂಕೀರ್ಣ ಗ್ರಾಮೀಣ ಬದುಕು ಇಷ್ಟಾದರೂ 'ಪ್ರಥಮತೆ' (Priority) ನೀಡಿದೆಯಲ್ಲ ಎಂದು ಸೋಜಿಗ ಅದರ ಜೊತೆಗೆ ಸಂದೇಹವೂ ಉಂಟಾಯಿತು.

—ಶ್ರೀರಾಮು ಬಿದರೆಕೋಟೆ
ಮೈಸೂರು-6

ಕುರುಬೂರಿನ ತುಂಬಾ ಸಂಘರ್ಷ ಸಮಿತಿ

ಇತ್ತೀಚೆಗೆ ಕೋಲಾರ ಜಿಲ್ಲೆಯ ಚಿತಾಮಣಿ ತಾಲ್ಲೂಕಿನ ಕುರುಬೂರಿನ ಬಡದಲಿತರಿಗೆ ಒಂದು ಸಂತೋಷದ ಸುದ್ದಿ. ಊರಿನ ದಲಿತರು ತಮಟೆಗಳನ್ನು ಬಾರಿಸಿಕೊಂಡು ಚಿಂತಾಮಣಿ ತಾಲ್ಲೂಕು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರಿಗೆ ಆದರದ ಆಮಂತ್ರಣ ಬಯಸಿದರು. ಅಂದು ಊರಿನ ದಲಿತರು ದಿನಪೂರ್ತಿ ಕೂಲಿ ಕೆಲಸಗಳನ್ನು ಬಿಟ್ಟು ಸಂಘದ ಕಾರ್ಯಕ್ರಮಕ್ಕಾಗಿ ವೇದಿಕೆ ಕಟ್ಟುವುದು ಮೊದಲಾದ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದ್ದರು. ಒಂದು ಸಾವಿರ ಕೂಲಿ ಮಾಡುವ ಬಡರೈತರು ತಮ್ಮ ಬಡಕಲು ಶರೀರಗಳಲ್ಲಿ ದಲಿತ ಕಾರ್ಯಕರ್ತರ ಜೊತೆಗೂಡಿ ಸಹಕರಿಸಿದರು. ಕರ್ನಾಟಕ ದಲಿತ ಸಂಘರ್ಷಸಮಿತಿ ಕೋಲಾರ ಜಿಲ್ಲೆ ಸಂಚಾಲಕರಾದ ಸಿ. ಎಂ. ಮುನಿಯಪ್ಪನವರು ಸಭೆಯನ್ನು ಉದ್ದೇಶಿಸಿ ದಲಿತ ಸಂಘರ್ಷ ಸಮಿತಿಯ ಹುಟ್ಟಿಗೆ ಕಾರಣ ಮತ್ತು ಯಾವ ರೀತಿ ಬೆಳವಣಿಗೆ ಹೊಂದುತ್ತಾ ಬಂದಿದೆ ಎಂಬುದರ ಬಗ್ಗೆ ಮಾತನಾಡಿದರು. ದಲಿತ ಕಲಾ ಮಂಡಳಿಯಿಂದ ಕ್ರಾಂತಿಕಾರಿ ಹಾಡುಗಳನ್ನು ಹಾಡಲಾಯಿತು. ಮತ್ತು ಕೊನೆಯಲ್ಲಿ ಹುಣಸೀಕೋಟೆಯ "ಶೇಷಗಿರಿಯಪ್ಪನ ಕಗ್ಗೊಲೆ ..." ನಾಟಕವನ್ನು ಪ್ರದರ್ಶಿಸಲಾಯಿತು.

—ನಾರಾಯಣಸ್ವಾಮಿ

ಶೃಂಗೇರಿಯಲ್ಲಿ D. S. S.

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲೋಕು ದಲಿತ ಸಂಘರ್ಷ ಸಮಿತಿ ಶಾಖೆಯನ್ನು ಮಾರ್ಚ್ 28ರಂದು ಉಧ್ಘಾಟಿಸಲಾಯಿತು. ರಾಜ್ಯಸಂಚಾಲಕ ಶ್ರೀ ಎಂ.ಡಿ. ಗಂಗಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಹೆಚ್. ಎಂ. ರುದ್ರಸ್ವಾಮಿ ಉದ್ಘಾಟಿಸಿದರು, ಕಾರ್ಯಕ್ರಮದಲ್ಲಿ ವಿಚಾರ ವೇದಿಕೆಯ ಡಿ. ಸುಬ್ರಮಣ್ಯಂ ಮತ್ತು ಉಪನ್ಯಾಸಕ ಶ್ರೀ ಪುಟ್ಟಯ್ಯ ಭಾಗ ವಹಿಸಿದ್ದರು.

ದಲಿತರಮಾರಿಗೆ ಬ್ರಾಹ್ಮಣಪೂಜಾರಿ

ಮಾರಿಹಬ್ಬದ ವೀಕ್ಷಣೆ

ರಾಜೇಂದ್ರ ಸಿಂಗ್

ಮಾರಮ್ಮನ ಪೂಜೆ ಮಾಡುವವನು ಬ್ರಾಮ್ಮಣರವನು,

ಮಾರಮ್ಮನ ಆವೇಶ ಬರುವುದು ಪರಿವಾರ ಜನಾಂಗದವನ ಮೇಲೆ.

ಮಾರಮ್ಮನ ಅಣ್ಣ ಬೀರಪ್ಪನ ಆವೇಶ ಬರುವುದು ಕುರುಬನ ಮೇಲೆ.

ಮಾರಮ್ಮನ ತಂಗಿ ಚಿಕ್ಕದೇವಮ್ಮ ಬರುವುದು ಲಿಂಗಾಯಿತನ ಮೇಲೆ.

ಮಾರಮ್ಮನ ಅಕ್ಕ ಮುನೇಶ್ವರಿ ಬರುವುದು ಬೆಸ್ತರವನ ಮೇಲೆ.

ಮಾರಮ್ಮನ ತಾತ ಸಿದ್ದಾಪ್ಪಾಜಿ ಬರುವುದು ಹರಿಜನದವನ ಮೇಲೆ.

ಹೆಗ್ಗಡದೇವನ ಕೋಟೆಯ ಬ್ರಾಹ್ಮಣರ ಬೀದಿಯಲ್ಲಿಯೇ ಮಾರಮ್ಮನೆಂಬ ಸವರ್ಣಿಯ ದೇವತೆ?–ಯ ದೇವಸ್ಥಾನ. ಇಲ್ಲಿ ಪೂಜೆಮಾಡುವವನು ಬ್ರಾಹ್ಮಣ ಜನಾಂಗಕ್ಕೆ ಸೇರಿದವನು. ದೇವಸ್ಥಾನದ ಗರ್ಭಗುಡಿಗೆ ಹೋಗುವಹಕ್ಕು ಬ್ರಾಹ್ಮಣ ಜನಾಂಗಕ್ಕೆ ಮತ್ತು ಲಿಂಗಾಯಿತರಿಗೆ ಮಾತ್ರವೇ ಲಭಿಸಿದೆ. ದೇವಸ್ಥಾನದ ಹಜಾರಕ್ಕೆ ಹೋಗುವ ಹಕ್ಕು ಹರಿಜನರು, ಮುಸ್ಲೀಮರನ್ನು ಬಿಟ್ಟು ಬೇರೆಲ್ಲ ಜನಾಂಗಕ್ಕಿದೆ.

ಕಳೆದ ಜುಲೈ ತಿಂಗಳು ಎಲ್ಲಾ ಜನಾಂಗದ ಮುಖ್ಯಸ್ಥರು ಸೇರಿ ಈ ಮಾರಿ ಹಬ್ಬವನ್ನು ಮಾಡಬೇಕೆಂದು ತೀರ್ಮಾನ ಕೈಗೊಂಡರು. ತಲಾ 25–00 ರೂಗಳಂತೆ ವಸೂಲಿ ಮಾಡಲಾಯಿತು. ಎಲ್ಲೋ ಗುರುತು ಸಿಗದೆ ಬಿದ್ದಿದ್ದ ದಲಿತನು ಕೂಡ ಈ ದುಡ್ಡಿನ ಮೂಲಕ ಗುರುತಿಸುವಂತಾದನು. ಹೊತ್ತಿನ ಕೂಳಿಗೂ ಗತಿಯಿಲ್ಲದ ಈತ ಹೇಗೆ ತಾನೇ ಕೊಟ್ಟಾನು? ಕೊಡದಿದ್ದರೆ ಮಾರಮ್ಮ ತಮ್ಮ ಮಕ್ಕಳು ಮರಿಯನ್ನು ಸುಮ್ಮನೆ ಬಿಟ್ಟಾಳೆಯೇ ? (ಜೀತದ ಕರಾರಿಗೋ, ಏನನ್ನೋ ಅಡವಿಟ್ಟೋ, ಬಡ್ಡಿಗಾಗಿ ಸಾಲಪಡೆದೋ) ಹಾಗೂ ಹೀಗೂ ಮಾಡಿ ಮುಂದಾಗಿ ಕೊಟ್ಟುಬಿಟ್ಟರು.

ಹಬ್ಬ ವಾರವಿದೆ ಎನ್ನುವಾಗಲೇ ಗುಡಿ ಮುಂದೆ ದೊಡ್ಡ ಚಪ್ಪರ-ತಯಾರಾಗಬೇಕು. ಅದು ಇಲ್ಲಿನ ಹರಿಜನದವನ ಕೆಲಸ. ಹಾಕಿರೊ ಚಪ್ಪರದಡಿ ನಿಲ್ಲುವ ಹಕ್ಕು ಈ ಜನಾಂಗಕ್ಕಿಲ್ಲ. ಈ ಹಬ್ಬದ ವಿಶಿಷ್ಟತೆ (ಬೆಂಕಿ ಮೇಲೆ ಓಡುವುದು) ಹೊಂಡ ಹಾಯುವುದು. ಹೊಂಡವನ್ನು ಸುಮಾರು 20ಅಡಿಉದ್ದ 5ಅಡಿ ಅಗಲತೆಗೆಯುವುದು ಇದು ಇದೇ ಜನಾಂಗದ ಕೆಲಸ. ಹೊಂಡಕ್ಕಾಗಿ 101 ಗಾಡಿಸೌದೆ ಬೇಕು. (ಅದಕ್ಕಾಗಿ ಮೈಸೂರಿನ ಡಿ.ಎಫ್.ಓ. ಅನುಮತಿ ನೀಡಿದ್ದರು) ಅದನ್ನು ಗಾಡಿಕಟ್ಟಿ ಕಾಡಿನಲ್ಲಿ ಕಡಿದು ಊರಿಗೆ ತಂದು ದೇವಸ್ಥಾನದ ಮುಂದೆ ಜೋಡಿಸುವುದು ಈ ಜನಾಂಗದ ಕೆಲಸ. ಸರಿದೂರದಲ್ಲಿ ನಿಂತು ತಮಟೆ ಹೊಡೆಯುವುದು. ಇಷ್ಟೆಲ್ಲ ಕಷ್ಟವಾದ ಕೆಲಸಗಳು ದಲಿತರ ಪಾಲಿಗಾದರೆ "ಲೇ ಮಾದ, ಕರಿಯ ಅತ್ಲಾಗ್ ನಿಂತ್ಕರ್ಲ" ಅನ್ಕಂಡು ಕೈಲಿ ಕಡ್ಡಿ ಹಿಡಿದು ಓಡಾಡುವುದು ಬ್ರಾಹ್ಮಣ ಹೈಕಳ ಕೆಲಸ.

ಕೊಂಡ ಹಾಯುವ ಹಿಂದಿನ ದಿನ ಮಾರಿಗೆ "ತಂಪು" (ಒಂದು-ರೀತಿಯ ಪೂಜೆ) ಮಾಡುವುದು ರೂಢಿ (ಎಲ್ಲಾಜನಾಂಗದವರು ಸೇರಿ) ಬ್ರಾಹ್ಮಣರು ಮಾಡಿರುವ ತಿಂಡಿಗಳನ್ನು ಗರ್ಭಗುಡಿಯ ಒಳಗೆ ತೆಗೆದುಕೊಂಡು ಹೋಗಿ ಪೂಜಿಸಲಾಗುತ್ತದೆ. ಹಜಾರದಲ್ಲಿ ಲಿಂಗಾಯಿತರು ತರುವ ಎಡೆಯನ್ನಿಟ್ಟು ಪೂಜೆಮಾಡುತ್ತಾರೆ. ಮಿಕ್ಕೆಲ್ಲ ಜನಾಂಗದವರು ತರುವ ಪೂಜೆಯನ್ನು ಹೊಂಡದ ಹೊರಗಡೆಯಿಟ್ಟು ಪೂಜಿಸುತ್ತಾರೆ.

ಸರಿ ದಲಿತರು ಜೋಡಿಸಿರುವ ನೂರೊಂದು ಗಾಡಿ ಸೌದೆಗೆ ಬೆಂಕಿ ಹಾಕುವುದು ಬ್ರಾಹ್ಮಣರ ಕೆಲಸ. ದಲಿತರು ಸುಮಾರು ಒಂದು ಪರ್ಲಾಂಗ್ ದೂರದಲ್ಲಿ ತಮಟೆ ಹೊಡೆಯುತ್ತಾ ವೀಕ್ಷಿಸುತ್ತಾರೆ. ದಿಗದ್ಧಿಗನೆ ಹತ್ತಿ ಉರಿಯುತ್ತಿರುವ ಬೆಂಕಿ ಜ್ವಾಲೆಯಿಂದ ದಲಿತರನ್ನು ನಿಧಾನವಾಗಿ ನುಂಗುವಂತೆ ಭಾಸವಾಗುತ್ತದೆ. ಎಷ್ಟೋ ವರ್ಷದಿಂದ ಮನೆಯ ಕತ್ತಲೊಳಗೆ ಕೊಳೆಯುತ್ತಿದ್ದ ಬೆಳ್ಳಗಿನ ಬ್ರಾಹ್ಮಣರು, ಲಿಂಗಾಯಿತರ ಹುಡಿಗಿಯರು ಮಾರಮ್ಮನ ಹಬ್ಬದ ನೆವದಿಂದ ದೇವಸ್ತಾನ ಸೇರುತ್ತಾರೆ. ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ದಲಿತರೇ ಈ ಕೆಂಡವನ್ನು (ಮಣೆಗಳಿಂದ) ಹೊಂಡಕ್ಕೆ ತಳ್ಳಿ ಕೈಕಾಲು ಸುಟ್ಟುಕೊಂಡು "ಮಾರಿ ಭಿನ್ನ ವಾಗವ್ಳೆ" ಅಂತ ಅನ್ಕಂದು ಹೋಗೋದು ನೋಡಿದಾಗ ಅವರ ಮುಗ್ಧತೆಗೆ ನನ್ನ ಕಣ್ಣಂಚಿನಲ್ಲಿ ನೀರಾಡುತ್ತದೆ,

ಕೊಂಡದ ಸುತ್ತ ಬ್ರಾಹ್ಮಣ ಪೂಜಾರಿ ಎಡೆ ಇಟ್ಟು ಬಾರಿ ಪೂಜೆಸಲ್ಲಿಸಿ ಯಾವುದೊ ಬಾಯಿಗೆ ಬರುವ ಶಬ್ದವನ್ನು ಗುಣಗುಟ್ಟುತ್ತಾನೆ. ಸರಿ ಮೂರು ನಾಲ್ಕು ಆಡುಮರಿಗಳನ್ನು ತಂದು ತಲೆಮೇಲೆ ತಣ್ಣೀರು ಸುರಿದು ಅವು ನಡುಗುವುದನ್ನೇ ಕಾಯುತ್ತಿದ್ದು ಕತ್ತಿಗೆ ಅವನ್ನು ಬಲಿಕೊಡುತ್ತಾರೆ. ಅಹಿಂಸೆ ಹೇಳೊರು ಕಣ್ಣುಬಿಟ್ಟುಕೊಂಡು ನೋಡುತ್ತಿರುವುದನ್ನು ನೋಡಿ ಅಸಹ್ಯವೆನಿಸುತ್ತದೆ. ಬಡವರ ತಲೆ ಹೋಗ್ತಾ ಇದ್ದರೂ, ಅವರ ಮೇಲೆ ದೌರ್ಜನ್ಯ ನಡಿತ್ತಿದ್ದರೂ ತಿರುಗಿ ನೋಡದ ಪೋಲೀಸಿನವರು, ಅಧಿಕಾರಿಗಳು ದೇವಸ್ಥಾನದ ಹತ್ತಿರವೇ ಝಂಡಾ ಹೂಡಿರುತ್ತಾರೆ.

ಇನ್ನೇನು ಹೊಂಡ ಹಾಯಬೇಕಾದರೆ ಮಾರಮ್ಮನ–ಅವಳ ಅಕ್ಕ ತಂಗಿಯರ, ಅಣ್ಣನ ಆವೇಶ ಬರಲೇಬೇಕು. ಈ ಆವೇಶದ ಬಗ್ಗೆ ಸ್ವಲ್ಪ ವಿಶದವಾಗೇ ಹೇಳಬೇಕು.

ಈ ಎಲ್ಲಾ ಆವೇಶಗಳು ಹೇಳದೇ ಕೇಳದೆ ಸಮಯಕ್ಕೆ ಸರಿಯಾಗಿ ಬಂದು ಬಿಡುತ್ತವೆ.

ತಮಾಷೆ ಎಂದರೆ ಬೆಳಗಿರುವ ಮಾರಮ್ಮ ಬರುವುದು ಪರಿವಾರದವನ ಮೇಲೆ ಬಂದರೂ ಅವನನ್ನು ದೇನಸ್ಥಾನದ ಒಳಕ್ಕೆ ಕೂಡುವುದಿಲ್ಲ. ಕಾರಣ ಅವನು ಕೀಳುಜಾತಿಗೆ ಸೇರಿದವನಾಗಿರುವುದು.

ಹರಿಜನರ ಕಿವುಡುಗಚ್ಚುವ ತಮಟೆ ಶಬ್ದದೊಂದಿಗೆ, ಪೋಲೀಸರ ಘರ್ಜನೆ, ಲಾಟಿಏಟುಗಳು, ದೂರನಿಂತು ನೋಡುತ್ತಿರುವ ದಲಿತರು ಮತ್ತು ಮುಸ್ಲೀಮರು, ಬ್ರಾಹ್ಮಣರ ಮುಂದಾಳತ್ವದಲ್ಲಿ ಹೊಂಡವನ್ನು ಲಿಂಗಾಯಿತರು ಹಾದದ್ದಾಯಿತು. ಸತ್ತು ಬಿದ್ದಿರುವ ಆಡುಗಳು ದಲಿತರ ಪಾಲಿಗಾದರೆ ಉಳಿದಿದ್ದ ಹಣ, ಕಾಯಿ ಹಣ್ಣು, ಅನ್ನವೆಲ್ಲ ಬ್ರಾಹ್ಮಣರ ವಶವಾದವು. ಸಾಯಂಕಾಲದ ತನಕವು ಮಾರಮ್ಮನಿಗೆ ಪೂಜೆ ನಡೆಯಿತು. ಸಾಯಂಕಾಲ 8 ಗಂಟೆ ಹೊತ್ತಿಗೆ ಸಿಕ್ಕಾಬಟ್ಟೆ ಮಳೆ ಪ್ರಾರಂಭವಾಯಿತು. (ಓದುಗರು ಆಶ್ಚರ್ಯಪಡಬೇಕಾಗಿಲ್ಲ. ಅದು ಮಲೆನಾಡಿಗೆ ಸೇರಿದ ಪ್ರದೇಶವಾದ್ದರಿಂದ ಯಾವಾಗಲೂ ಮಳೆ ಬಿದ್ದೆ ಬೀಳುತ್ತದೆ.) ಹೊರಗೆ ನಿಂತಿದ್ದವರು ಮಳೆಯಿಂದ ರಕ್ಷಣೆ ಪಡೆಯಲು ದೇವಸ್ಥಾನದತ್ತ ನುಗ್ಗಿದರು. ಸರಿ ಹರಿಜನರು ದೇವಸ್ಥಾನದ ಸೂರಿನ ಹತ್ತಿರ ಬಂದರು. ಸರಿ ಬ್ರಾಹ್ಮಣರ ಭೂಪನೊಬ್ಬ ಬಡಿಗೆ ಹಿಡಿದು ತಳ್ಳಿಯೇ ಬಿಟ್ಟರು. ಮಳೆಯಲ್ಲಿ ನೆನೆಯುತ್ತಾ ನಿಂತುಕೊಂಡರು. ಅವರ ಜೊತೆಯೇ ನಿಂತಿದ್ದ ಮುಸ್ಲಿಮ್ ಹುಡುಗರು ಬ್ರಾಹ್ಮಣರನ್ನು ಬೈದರು. ಸರಿ ಅವರಿಗೆ ಬ್ರಾಹ್ಮಣರು ಚೆನ್ನಾಗಿ ಛೀಮಾರಿ ಹಾಕಿ ಓಡಿಸಿದರು. ಇಡೀ ಮಾರಿಹಬ್ಬನಡೆಯಲು ಕಾರಣವಾದ ದಲಿತರು ಮತ್ತು ಮುಸ್ಲೀಮರು ನೆನೆಯುತ್ತಲೇ ಮನೆಯತ್ತ ಸಾಗಿದರು. ■

ತತ್ತರಿಸುತ್ತಿರುವ ಮದಲೂರು ; ಒಂದು ಸಮೀಕ್ಷೆ

ಸಮೀಕ್ಷೆ : **ನರಸಿಂಹಮೂರ್ತಿ**

ತುಮಕೂರು ಜಿಲ್ಲೆ ಶಿರಾತಾಲೂಕ್ ಕಸಬಾ ಹೋಬಳಿ ಮದಲೂರು ಗ್ರಾಮದಲ್ಲಿ ಸುಮಾರು 50-60 ಹರಿಜನ ಕುಟುಂಬಗಳಿವೆ. ಅವು ಎಲ್ಲವೂ ತೆಂಗಿನಗರಿಯ ಬಡಗುಡಿಸಲುಗಳು. ಅವರ ಬಡಗುಡಿಸಲುಗಳನ್ನು ನೋಡುತ್ತಲೆ ಹೇಳಬಹುದು ಅವರ ಜೀವನ ಮಟ್ಟವನ್ನು. ಆ ಕುಟುಂಬಗಳಲ್ಲಿ ಎಲ್ಲರೂ ಅವಿದ್ಯಾವಂತರೇದ್ದಾರೆ. ಇಂತಹವರ ಬದುಕಿಗೆ ಮುಳ್ಳಾಗಿರುವಂತಹ ವ್ಯಕ್ತಿ ಎಂದರೆ ಆ ಊರಿನ ಶ್ರೀಮಂತ ಹಾಗೂ ಶಿರಾ ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿರುವಂತಹ ಎಂ. ಕೆ. ಮುರುಗೇಗೌಡ. ಇವನು ಬಡವರ ಬಂಧು ಎಂದು ಹೇಳಿಕೊಳ್ಳುವ, ಬಡವರ ಹೆಸರೇಳಿ ಅಧಿಕಾರ ಸೂತ್ರ ಹಿಡದಿರುವ ಹಾಗೂ ಇಂದಿನ ಭಾರತದ ಪ್ರಧಾನ ಮಂತ್ರಿಯಾಗಿರುವ ಇಂದಿರಾ ಗಾಂಧಿಯ ಪಕ್ಷವಾದ ಕಾಂಗ್ರೆಸ್ 'ಐ' ಪಕ್ಷದಿಂದ ಚುನಾಯಿತನಾದವನು.

ಮದಲೂರಿನಲ್ಲಿ ಪ್ರತಿವರ್ಷ ಶ್ರೀರಾಮನವಮಿ ಹಬ್ಬವನ್ನು ಹರಿಜನರೆಲ್ಲರೂ ಸಾಮೂಹಿಕವಾಗಿ ಒಂದು ಕಡೆ ಸೇರಿ ಮಾಡುತ್ತಿದ್ದಂತೆ ತಾರೀಖು 13-4-81ರಂದು ಹಬ್ಬ ಮಾಡುತ್ತಿದ್ದ ಸಮಯದಲ್ಲಿ ಹಠಾತ್ತಾಗಿ ಸುಮಾರು 8–10 ಜನರ ಗುಂಪು ಬಂದಿತು. ಅದು ಎಂ.ಕೆ. ಮುರುಗೇ ಗೌಡನು ಕಳಿಸಿರುವಂಥ ಗೂಂಡಾಗಳ ಗುಂಪು. ಇದಿನ್ನು ದಲಿತರಿಗೆ ತಿಳಿದಿಲ್ಲ. ಬಂದಂತಾ ಗುಂಪು ಪ್ರಸಾದ ಕೇಳಿದಾಗ ವಿನಯದಿಂದ ಪ್ರಸಾದವನ್ನು ಕೊಟ್ಟಿರುತ್ತಾರೆ. ನಂತರ ಬಾಳೆಹಣ್ಣು, ಎಲೆ ಅಡಿಕೆ ಕೇಳಲು ಅರ್ಧರಾತ್ರಿಯಲ್ಲಿ ಅಂಗಡಿಗೆ ಹೋಗಿ ತಂದುಕೊಟ್ಟಿರುತ್ತಾರೆ. ಹರಿಜನರು ಭಜನೆಯಲ್ಲಿ ಮಗ್ನರಾಗಿದ್ದಾಗ ಈ ಗೂಂಡಾಗಳ ಗುಂಪಿನಲ್ಲಿ ನಮ್ಮ ಕೇರಿಯ ಮಧ್ಯದಲ್ಲಿ ಗುಡಿಸಲು ಮನೆಯಲ್ಲಿ ಮಲಗಿದ್ದ ನರಸಿಂಹಯ್ಯನ ಮಗಳು ಪುಟ್ಟಮ್ಮ ಎಂಬ ಬಾಲಕಿಯ ಮೇಲೆ ಸಂಜೀವ ಎಂಬ ಸವರ್ಣಿಯ ಬಲತ್ಕಾರದಿಂದ ಅತ್ಯಾಚಾರ ಮಾಡಲು ಹೋದಾಗ ಗಾಬರಿಯಿಂದ ಆ ಬಾಲಕಿ ಕೂಗಲು ಪಕ್ಕದ ಮನೆಯಲ್ಲಿದ್ದವರು ಓಡಿಬಂದು ನೋಡಲು ಸಂಜೀವನು ಮನೆಯಲ್ಲಿಯೇ ಸಿಕ್ಕಿರುತ್ತಾನೆ. ಇದರ ಬಗ್ಗೆ ನಮಗೆ ನ್ಯಾಯಬೇಕೆಂದು ಕೇಳಲು ಅಲ್ಲಿನ ಅಂಜನಪ್ಪನನ್ನು ಅವನ ತಾಯಿ ಓಡಿ ಹೋಗಿ ಮುರುಗೇಗೌಡನನ್ನು ಕರೆದುಕೊಂಡು ಬಂದಿರುತ್ತಾಳೆ. ಅವನಿಗೆ ಇಲ್ಲಿ ನಡೆದ ವಿಚಾರವನ್ನು ಹೇಳಲು ನಾಮಕಾವಸ್ಥೆಗೆ ಸಂಜೀವನ್ನ ಎರಡು ಏಟುಹಾಕಿ ಮನೆಗೆ ಕಳುಹಿಸಲು ಯತ್ನಿಸಿದಾಗ, ಅಲ್ಲಿನ ಸಣ್ಣೀರಯ್ಯ ಎಂಬ ಅಂಗವಿಕಲನು ನಮಗೆ ಇದರ ಬಗ್ಗೆ ನ್ಯಾಯ ಬೇಕು ಎಂದು ತಡೆದಿದ್ದಕ್ಕೆ, ಮುರುಗೆಗೌಡನು ಹೀನವಾದ ಮಾತುಗಳಿಂದ ಮನಸ್ಸಿಗೆ ಬಂದ ಹಾಗೆ ಬೈದಿರುತ್ತಾನೆ.

ಇದೇ ವಿಚಾರವನ್ನು ದೊಡ್ಡದು ಮಾಡಿಕೊಂಡು 14-4-81ರಂದು ಈ ಗುಂಪು ಮದಲೂರಿನಲ್ಲಿರುವ ಇತರ ಎಲ್ಲಾ ಜಾತಿಯವರನ್ನು ಎತ್ತಿಗಟ್ಟಿ ರಾತ್ರಿ 7-8 ಗಂಟೆ ಸಮಯದಲ್ಲಿ ಸಣ್ಣೀರಯ್ಯನ ಮನೆಗೆ ಮುತ್ತಿದರು. ಪಾಪ ಅಂಗವಿಕಲ ಸಣ್ಣೀರಯ್ಯ ಮನೆಯ ಬಾಗಿಲಲ್ಲಿ ಕುಂತಿದ್ದ ಸವರ್ಣೀಯ ಈ ಗುಂಪು ಆತನನ್ನು ಹಿಡಿದು ಹೊಡೆಯಲು ಯತ್ನಿಸಿರುತ್ತಾರೆ. ಆದರೆ ಮೊದಲು ರಾತ್ರಿ ಗಾಸಿ ಬಿದ್ದಿದ್ದ ದಲಿತರು ಯಾವಾಗಳಿಗೆಯಲ್ಲಿ ಏನಾಗುವುದೋ ಏನೋ ಎಂಬ ಭಯದಿಂದ ಇದ್ದಂತವರು ಎಲ್ಲರೂ ಬಂದು ಅವರನ್ನು ತಡೆದರು. ಈ ಕೇರಿಯಲ್ಲಿ ಕೆಲವರು ಹೋಗಿ ಮುರುಗೇಗೌಡನನ್ನು ಸ್ವಾಮಿ ತಾವು ದೊಡ್ಡವರು ಇಂತಹ ಗಲಾಟೆಗೆ

ಹೀಗ್ಯಾಕೆ

ಅವಕಾಶ ಕೊಡಬೇಡಿ ಎಂದು ಕೇಳಿಕೊಂಡಾಗ ಪಾಪಿ.ಗೌಡನ ಮನಸ್ಸು ಕರಗಲಿಲ್ಲ. ಅವನು ಹೋದಂತ ಹರಿಜನರನ್ನು ಕಾಲಿನಿಂದ ಒದ್ದು ಹೊಡೆದು ಕಳುಹಿಸಿ, ಸವರ್ಣೀಯರನ್ನುದ್ದೇಶಿಸಿ ಈ ಮಾದ್ಗನನ್ನ ಮಕ್ಕಳನ್ನು ಕೊಲೆಮಾಡಿ ಸರ್ಕಾರ, ಈ ಪೋಲೀಸ್ ಎಲ್ಲಿ ಬರುತ್ತು ನನ್ನ ಶ್ಯಾಟ ಕಿತ್ತುಕೊಳ್ಳಿ, ಎಂದು ಉರಿದುಂಬಿಸಿ ಆಯುದಗಳ ಸಮೇತ ಈ ಗುಂಪನ್ನು ಕಾಲೋನಿಯೊಳಗೆ ನುಗ್ಗಿಸಿದನು.

ಈ ವಿಚಾರವನ್ನು ಶಿರಾ ಪೋಲೀಸ್‌ಠಾಣೆಗೆ ದೂರು ಕೊಡಲಾಗಿ ಅಲ್ಲಿನ ಸಬ್‌ಇನ್ಸ್‌ಪೆಕ್ಟರ್ ತನ್ನ ಸಿಬ್ಬಂದಿಯೊಂದಿಗೆ ಬಂದು ಗಾಯಗೊಂಡವರನ್ನು ಶಿರಾ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆಯನ್ನು ಕೊಡಿಸಿದರೆ ಹೊರತು ಅವರ ಮೇಲೆ ಯಾವ ವಿಧವಾದಂತ ಮೊಕದ್ದಮೆಯನ್ನು ದಾಖಲೆ ಮಾಡಿರುವುದಿಲ್ಲ, ಎಂ.ಕೆ. ಮುರುಗೇಗೌಡ ಸುಮಾರು ಏಳೆಂಟು ವರ್ಷಗಳಿಂದಲೂ ಕುರುಡು-ಕುಂಟರ ಮೇಲೆ ಒಂದಲ್ಲ ಒಂದು ವಿಧದಲ್ಲಿ ಕಿರುಕುಳ ಕೊಡುತ್ತಾ ಬಂದಿದ್ದಾನೆ. ನಾವು ಗ್ರಾಮದ ಹಿತದೃಷ್ಟಿಯಿಂದ ಗಲಾಟೆ ಮಾಡಲಿಲ್ಲ. ಆದರೆ ಈಗ ನಮ್ಮ ನೋವು ಹೆಚ್ಚಾಗಿ ಗಲಾಟೆ ಮಾಡಬೇಕಾಯಿತು.

ಇದಾದ ಮೇಲೆ ಗ್ರಾಮದಲ್ಲಿರುವ ಎಲ್ಲ ಜಾತಿಯವರನ್ನು ಅಂಗಡಿ ಹೋಟೆಲಿನವರನ್ನು ಬಲವಂತದಿಂದ ತನ್ನ ಹಿಡಿತಕ್ಕೆ ತೆಗೆದುಕೊಂಡು 15-4-81ರಂದು ನಮ್ಮ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿಸಿದ್ದಾರೆ. ಇದರಿಂದ ಊರಿನಲ್ಲಿ ಯಾರೂ ಕೂಲಿಗೆ ಕರೆಯುವುದಿಲ್ಲ ಒಂದುವೇಳೆ ಹರಿಜನರಿಗೆ ಸಹಾಯ ಮಾಡಿದರೆ ಅವರ ಅಂಗಡಿ ಹೋಟಲುಗಳನ್ನು ಲೂಟಿ ಮಾಡಿಸುತ್ತೇನೆ ಮತ್ತು ಸಾಧ್ಯವಾದರೆ ಅಂತವರ ಕೈಕಾಲುಗಳನ್ನು ಮುರಿಸುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ. ಇಂತಹ ವಿಷಯದಲ್ಲಿ ಸಬ್ ಇನ್ಸ್‌ಪೆಕ್ಟರ್‌ಗೆ ತಿಳಿಸಿದ್ದರೂ ಸಹ ಹರಿಜನರಿಗೆ ಯಾವುದೇ ವಿಧವಾದಂತ ರಕ್ಷಣೆ ಕೊಟ್ಟಿಲ್ಲ. ಅವನು ಮುರುಗೇಗೌಡನ ಹಣದ ಪ್ರಭಾವದಿಂದ ಸವರ್ಣೀಯರಿಗೆ ಪೋಷಕರಾಗಿರುವುದು ಶೋಚನೀಯವಾದುದು. ಇದೆಲ್ಲಕ್ಕಿಂತ ಮಿಗಿಲಾಗಿ ಹರಿಜನರು ನೀರು ಕುಡಿಯುವ ಬಾವಿಗೆ ವಿಷ ಬೆರಸುವ ಬೆದರಿಕೆಯನ್ನು ಹಾಕಿರುತ್ತಾನೆ.

ನಾನು , ತಾರೀಖು 29–12–81ರಂದು ಕರ್ನಾಟಕ ದಲಿತ ಸಂಘರ್ಷಸಮಿತಿಯ ಕಾರ್ಯ[illegible]ಕರ್ತರೊಂದಿಗೆ ಮದಲೂರಿಗೆ ಭೇಟಿ ಕೊಟ್ಟಾ[illegible] ತಿಳಿದ ಸಂಗತಿ.

ಈ ಮೇಲ್ಕಂಡ ವಿಷಯದ ಬಗ್ಗೆ ಪೋಲೀಸ್[illegible] ದೂರು ಕೊಟ್ಟಿದ್ದಕ್ಕೆ ಎಂಡಾರ್ಸ್ಮೆಂಟ ಕೇ[illegible]ದ್ದಕ್ಕೆ ಈ ಖಾಖಿ ಕದೀಮ ಲಂಚಕೋ[illegible] ಸಬ್‌ಇನ್ಸ್‌ಪೆಕ್ಟರ್ ದಲಿತರನ್ನು ಬಾಯಿ[illegible] ಬಂದಂತೆ ಬೈದು ನನ್ನ ಮೇಲೆ ಐ.ಜಿ.ಪಿ.ಯಿಂ[illegible] ಹಿಡಿದು ಮುಖ್ಯಮಂತ್ರಿಯವರೆಗೂ ದೂರ[illegible] ಕೊಡಿ ಅವರೆಲ್ಲ ಬಂದು ನನ್ನ ಶ್ಯಾಟಗಳನ್ನು ಕಿತ್ತು ಒಂದು ಎರಡು ಎಂದು ಎಣಿಸಲಿ ಎಂ[illegible]ರುತ್ತಾನೆ. ಅಲ್ಲದೆ ಗೌಡನ ಪಾರ್ಟಿಯವರು ಕೊಟ್ಟದೂರಿನ ಮೇಲೆ ನೋವು ತಿಂದವರನ್ನೆ ಕೋರ್ಟಿಗೆ ತಿರುಗುವಂತೆ ಮಾಡಿರುತ್ತಾನೆ.

ಇದರ ವಿಚಾರವಾಗಿ ಮುಖ್ಯಮಂತ್ರಿಯಿಂದ ಹಿಡಿದು ಇತರ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೂ ದೂರುಕೊಟ್ಟಿದ್ದರೂ ಇವರ್‍ಯಾರು ಏನೂ ಸಹಮಾಡಿಲ್ಲ. ಬಡವರ ಮೇಲೆ ಉದ್ದುದ್ದ ಭಾಷಣ ಮಾಡುವಂತಹ ಬೂಸಾರಾಜಕಾರಣಿಗಳಾಗಲಿ, ಲಂಚಕ್ಕೆ ಕೈಚಾಚಿ ತಮ್ಮ ತ[illegible]ವನ್ನೆ ಕಳೆದುಕೊಂಡಿರುವ ಅಧಿಕಾರಿಗಳಿಂದಾಗ[illegible] ನಮಗೆ ರಕ್ಷಣೆ ದೊರೆಯುವುದಿಲ್ಲ. ಆದುದರಿಂ[illegible] ಅನ್ಯಾಯ, ಮೋಸ, ಮತ್ತು ದಬ್ಬಾಳಿಕೆ[illegible] ಒಳಪಟ್ಟಂತ ಎಲ್ಲಾ ನನ್ನ ದಲಿತ ಬಂಧುಗ[illegible] ಒಂದಾಗಿ ಇಂತಹವರ ವಿರುದ್ಧ ಭೀಕರವಾದ[illegible] ಪ್ರತಿಭಟನೆಯನ್ನು ವ್ಯಕ್ತಪಡಿಸಿದರೆ ನಾವು [illegible] ನೀತಿಗೆಟ್ಟ ಸಮಾಜದಲ್ಲಿ ಉಳಿಯಲು ಸಾಧ್[illegible]ವಾಗುತ್ತದೆ.

ಆರ್ಮುಗಂ ಗೂಂಡಾಗಿರಿಯಿಂದ ಕೆ.ಜಿ.ಎಫ್. ಬಿಡುಗಡೆ

ಆಗ 3 ಜನ ಗೂಂಡಾಗಳು ಪೋಲಿಸ್ ಸ್ಟೇಷನ್ ಬಳಿಗೆ ನಮ್ಮ ಕಡೆ ನುಗ್ಗಿ ಬಂದರು. ಅವರು ಚೆನ್ನಾಗಿ ಕುಡಿದಿದ್ದರು. ಅದರಲ್ಲಿ ಒಬ್ಬ ನನ್ನ ಕಡೆ ಬೆರಳು ಮಾಡಿ, "ಯಾರಡಾ ನೀ, ದಲಿತ್ ಸಂಘಮಾ? ಆರ್ಮುಗಂ ಯಾ ರ ಡಾ ? ಅವ ಟೈಗರ್ ಅಡಾ? ಎಂ.ಎಲ್.ಎ. ಅಡಾ? ಅವ ಅಂಬೇಡ್ಕರ್ ಅಡಾ? ಕೆ.ಜಿ.ಎಫ್. ಕೋಎಂಗ ವಂದೆನೀ? ನೀನ್ ದಲಿತ್ತಾ? ಕಮ್ಯುನಿಸ್ಟ್‌ಡಾ? ಚುಮ್ಮಾ ಪೋ. ಇಲ್ಲಾ ಅನ್ನೆ...." ಇತ್ಯಾದಿ ತೊದಲುತ್ತಿದ್ದ. ಅಷ್ಟುಹೊತ್ತಿಗೆ ಏದುತ್ತ ಬಂದ S.P. ಅವರನ್ನು ಹೊರಗೆ ಕಳಿಸುವಂತೆ ಪೋಲೀಸರಿಗೆ ಆಜ್ಞೆ ಮಾಡಿದರು. ಅದರೆ ಆರ್ಮುಗಂ ಗೂಂಡಾಗಳು ಪೋಲೀಸರನ್ನೆ ನೂಕಿ ಬೈಯುತ್ತಿದ್ದರು. "ನೀವು ಒಳಗಡೆ ಕುಳಿತುಕೊಳ್ಳಿ ಸ್ವಾಮಿ, ನಿಮ್ಮನ್ನು ಕಂಡರೆ ಅವರಿಗೆ ಮತ್ತಷ್ಟು ಕೋಪ ಬರುತ್ತೆ" ಎಂದು ಹೆಣ್ಣು ಪೋಲಿಸೊಬ್ಬಾಕೆ ನಮಗೆ ಒತ್ತಾಯ ಮಾಡದಳು. ಮತ್ತೆ ನಾವು S.P. ಯವರ ಹತ್ತಿರ ಮಾತನಾಡಲು ಹೋದೆವು. ಈಗ S.P. ತುಂಬಾ ಬಿಗಿಯಾಗಿದ್ದರು. ಆರ್ಮುಗಂ ಕಡೆಯವರು ಮೆರವಣಿಗೆ ಮಾಡುವುದಾದರೆ ಅವರಿಗೂ ಅವಕಾಶ ಕೊಡಿ ನಮಗೂ ಅವಕಾಶಕೊಡಿ. ನಾವಂತೂ ಶಾಂತಿಯುತವಾಗಿ ಮೆರವಣಿಗೆ ಮಾಡಿ ಸಭೆ ನಡೆಸುತ್ತೇವೆ" ಎಂದೆವು. ಅಷ್ಟುಹೊತ್ತಿಗೆ ಮತ್ತೊಬ್ಬ ಪೋಲೀಸ್ ಬಂದು ಸ್ವಾಮಿ ಈ ಕಡೆಯಿಂದ ಜನ ನುಗ್ಗಿ ಬರುತ್ತಿದ್ದಾರೆ ಎಂದ ನಡುಗುತ್ತ. S.P. ಯವರು ಲಾಟಿ ಛಾರ್ಜಿಗೆ ಆಜ್ಞೆಮಾಡಿದರು. ಆಜ್ಞೆ ಸಿಕ್ಕಿದ್ದೇ ತಡ. ಪೋಲೀಸರು ರಸ್ತೆಯಲ್ಲಿ ಹೋಗುತ್ತಿದ್ದ ನಿರಪರಾಧಿಗಳನ್ನೆಲ್ಲ ಹಿಡಿದು ಚೆನ್ನಾಗಿ ಥಳಿಸತೊಡಗಿದರು. ಇದ್ದಕ್ಕಿದ್ದ ಹಾಗೆ ಅಂಗಡಿ ಬಾಗಿಲುಗಳೆಲ್ಲ ಮುಚ್ಚಿದವು. ಜನ ದಿಕ್ಕಾಪಾಲಾಗಿ ಓಡತೊಡಗಿದರು. ಬಸ್ಸುಗಳ ಓಡಾಟ ಅಸ್ತವ್ಯಸ್ತವಾಯಿತು. 4–5 ಪೋಲೀಸು ವ್ಯಾನುಗಳು ಬಂದವು.

ನಾವು ಪೋಲೀಸ್ ಸ್ಟೇಷನ್‌ನಲ್ಲಿ ಕುಳಿತುಕೊಂಡಿದ್ದಂತೆ ಒಬ್ಬ ತರುಣ ಚಂದ್ರಶೇಖರ ಶೆಟ್ಟಿ ತಲೆ ಮೈ ಕೈ ಎಲ್ಲ ರಕ್ತಮಯವಾಗಿ, ಸೋರುತ್ತ, ನರಳುತ್ತ ಪೋಲೀಸ್ ಸ್ಟೇಷನ್‌ಗೆ ಬಂದ. ಆತನನ್ನು ನೋಡಿ ನನಗೆ ದಿಗ್ಭ್ರಮೆಯಾಯಿತು. "ಯಾರು ನೀನು? ಯಾರು ಹೀಗೆ ಹೊಡೆದರು" ಎಂದು ಕೇಳಿದೆ. ಅದಕ್ಕೆ ಆತ. "ನಾನು ಪೇಟೆಗೆ ಬಂದಿದ್ದೆ. ಅಲ್ಲಿ ಒಂದಷ್ಟು ಜನ ನುಗ್ಗಿ ನನ್ನನ್ನ ಹೊಡೆದರು. ನನಗೆ ತಲೆ ಸುತ್ತುತ್ತಾ ಇದೆ. ಆಸ್ಪತ್ರೆಗೆ ಕಳಿಸಿ" ಎಂದ. ಆತನನ್ನು ಬೆಂಚಿನಮೇಲೆ ಮಲಗಿಸುತ್ತಿದ್ದಂತೆ, ಇನ್ನೊಬ್ಬ ಹುಡುಗ ಬಟ್ಟೆ ಬರೆ ಎಲ್ಲ ರಕ್ತದಲ್ಲಿ ಅದ್ದಿಹೋಗಿದ್ದವು. ತಲೆಗೆ ಬಲವಾದ ಏಟು ಬಿದ್ದಿತ್ತು. ಕುಂಟುತ್ತಾ ಸ್ಟೇಷನ್ ಬಳಿಗೆ ಬಂದ. ಆತನನ್ನು "ನೀನು ಯಾರು?" ಎಂದೆ. ಆತ "ನಾನು D.S.S. ಸಾರ್" ಎಂದ. 'ಯಾವ ಊರು" ಎಂದೆ. 'ಕೋಲಾರ' ಎಂದು. ಆಗ ನನಗೆ ಸ್ಪಷ್ಟವಾಯಿತು. ಲಾರಿಯಲ್ಲಿ ಹೋದವರು D.S.S. ಹುಡುಗರೆ ಎಂದ. ಮತ್ತು ಬಸ್ಸಿನಲ್ಲಿ ಬರುತ್ತ ನಾನು ಅಂಬೇಡ್ಕರ್ ಪಾರ್ಕಿನ ಮುಂದೆ ಕಂಡ ಜನ ಆರ್ಮುಗಂ ಕಡೆಯವರು ಎಂದು ತಿಳಿದಾಗಲಂತೂ ಮೈ ನಡುಗಿದಂತಾಯಿತು. ನಾನೇನಾದರೂ ಅವರೇ D.S.S. ನವರು ಅಂತ ಅವರ ಹತ್ತಿರ ಹೋಗಿದ್ದರೆ ನನ್ನನ್ನು ಸರಿಯಾಗಿ ಥಳಿಸಿಬಿಡುತ್ತಿದ್ದರು. ವೆಂಕಟೇಶನನ್ನ ಕೇಳಿದೆ ಏನು ನಡೆಯಿತು ಹೇಳುಎಂದು. ಆತ ಹೇಳಿದ: D.S.S. ಜಿಂದಾಬಾದ್ ಎಂದು ಕೂಗುತ್ತಿದ್ದ ಇವರನ್ನು ಲಾರಿಯ ಡ್ರೈವರ್ D.S.S ನವರು ಎಂದು ತಪ್ಪು ಭಾವಿಸಿಕೊಂಡು ಆರ್ಮುಗಂ ಗುಂಪಿನವರು ಕಾಯುತ್ತಿದ್ದ ಅಂಬೇಡ್ಕರ್ ಪಾರ್ಕಿನ ಹತ್ತಿರ ಕರೆದುಕೊಂಡು ಹೋದ. ಚಾಕು. ಚೈನು, ದೊಣ್ಣೆ, ಇತ್ಯಾದಿ ಮಾರಕ ಅಸ್ತ್ರಗಳಿಂದ ಸಿದ್ಧವಾಗಿ ನಿಂತಿದ್ದ ಆರ್ಮುಗಂ ಗುಂಪಿನವರು D.S.S. ಜಿಂದಾಬಾದ್ ಎಂದು ತಮ್ಮ ಹತ್ತಿರ ಬಂದ ಲಾರಿಯನ್ನು ಕಂಡಕೂಡಲೆ ಕೆಂಡವಾದರು. ಇಷ್ಟಕ್ಕಿದ್ದಂತೆ ಲಾರಿಯತ್ತ ಕಲ್ಲುಗಳನ್ನು ಬೀರತೊಡಗಿದರು. ಕಲ್ಲುಗಳ ಸುರಿಮಳೆ ಸುರಿಯತೊಡಗಿದ ಕೂಡಲೆ ಹುಡುಗರು ಲಾರಿಗಳಲ್ಲಿ ಬಗ್ಗಿ ಕುಳಿತುಕೊಂಡರು. ಆರ್ಮುಗಂ ಗೂಂಡಾಗಳು ಚಾಕು, ಚೈನು ದೊಣ್ಣೆಗಳೊಂದಿಗೆ ಲಾರಿಯನ್ನು ಹತ್ತಿ ಮೇಲುಗಡೆಯಿಂದ ತಲೆಬಗ್ಗಿಸಿಕೊಂಡಿದ್ದ ಯುವಕರನ್ನು ಬಡಿದರು. ಏಟುಗಳಿಂದ ಒಬ್ಬನ ಕಿವಿಹರಿದು ಹೋಯಿತು. ಕೆಲವರ ತಲೆಗಳು ತೂತುಬಿದ್ದವು. ಇತ್ಯಾದಿ. ಲಾರಿ ಕಂಡೆಕ್ಟರ್ ಮತ್ತು ಡ್ರೈವರ್ ಇಬ್ಬರನ್ನು ಚೆನ್ನಾಗಿ ಥಳಿಸಿ, ಲಾರಿಯ ಗಾಜುಗಳನ್ನೆಲ್ಲ ಒಡೆದು ಸೂರೆಮಾಡಿದರು. ಹೊಡೆತದಿಂದ ಲಾರಿ ಡ್ರೈವರ್ ಮತ್ತು ಕಂಡಕ್ಟರ್ ಅಳುತ್ತ ಪೊ ಲೀಸ್ ಸ್ಟೇಷನ್‌ಗೆ ಬಂದರು. S.Pಯವರು ನಮ್ಮನ್ನು ಕುರಿತು, "ನೀವು ಏಕೆ ಲಾರಿಯಲ್ಲಿ ಜನ ತಂದಿರಿ" ಎಂದು ಪ್ರಶ್ನೆ ಮಾಡುತ್ತಿದ್ದರೇ ಹೊರತು ಲಾರಿಯಲ್ಲಿದ್ದ ಅಮಾಯಕ ಯುವಕರ ಮೇಲೆ ಹಲ್ಲೆ ನಡೆಸಿದ ಗೂಂಡಾಗಳನ್ನು ಬಂಧಿಸಿ ಎಂದರೆ S.P.ಯವರು ನಮ್ಮ ಮಾತುಗಳನ್ನು ಕಿವಿ ಮೇಲೆಹಾಕಿಕೊಳ್ಳುತ್ತಿರಲಿಲ್ಲ. ಕೆಲವು C.I.Dಗಳು "ಮೆರೆವಣಿಗೆ ಮಾಡುವುದರಿಂದ ತುಂಬಾ ಅಪಾಯವಿದೆ. ಮಾಡದಿರುವುದೇ ಒಳಿತು" ಎಂದು ಪದೇ ಪದೇ ಹೇಳುತ್ತಿದ್ದರು. ಆದರೂ ನಾವು ನಿರ್ಧಾರದ ದನಿಯಲ್ಲಿ 'ಈ ಹೊತ್ತು ಏನೇ ಆದರೂ ನಾವು ಮೆರವಣಿಗೆ ಮಾಡುವುದೇ ಸೈ" ಎಂದು ಹೇಳುತ್ತಿದ್ದೆವು. S.P. ಯವರಿಂದ ಹಿಡಿದು ಸಾಮಾನ್ಯ ಪೇದೆಯವರೆಗೆ ಎಲ್ಲ ಪೋಲೀಸರು ಆರ್ಮುಗಂ ಅವರಿಗೆ ಹೆದರಿಕೊಂಡಂತಿತ್ತು.

ಎಲ್ಲೆಲ್ಲಿ ಗಲಾಟೆ ನಡೆಯುತ್ತಿದೆಯೋ ಅದನ್ನೆಲ್ಲ ಹತ್ತಿಕ್ಕುವಂತೆ, ಎಸ್.ಪಿ. ಆಜ್ಞೆ ಹೊರಡಿಸಿದ ಕೂಡಲೆ ಪೋಲಿಸ್ ವ್ಯಾನುಗಳು ಸಿದ್ಧವಾದವು. ಪೋಲಿಸರು ರಸ್ತೆಗಳಲ್ಲಿ ಸಿಕ್ಕಸಿಕ್ಕವರನ್ನೂ ಬಡಿಯುತ್ತಿದ್ದರು. ಪರಿಸ್ಥಿತಿ ಹೀಗಿರುವಾಗ ಮೆರವಣಿಗೆ ಮಾಡಕೂಡದೆಂದು ಎಸ್.ಪಿ ನಮಗೆ ಒತ್ತಾಯಿಸುತ್ತಾ, 144 ಸೆಕ್ಷನ್ ಜಾರಿ ಮಾಡುವುದಾಗಿ. ಬೆದರಿಸುತ್ತಿದ್ದರು.

ಒಂದು ಕಡೆ ಏಟು ತಿಂದವರನ್ನು ಆಸ್ಪತ್ರೆಗೆ ಕಳಿಸುತ್ತಿದ್ದಂತೆ ಮತ್ತೊಂದು ಕಡೆ ಸಾವಿರಕ್ಕೂ ಹೆಚ್ಚಿನ ದ.ಸಂ.ಸ ಬೃಹತ್ ಮೆರವಣಿಗೆ ಮುಖ್ಯ ಬೀದಿಯಲ್ಲಿ ಬರುತ್ತಿತ್ತು.

ಮೆ ರ ವ ಣಿ ಗೆ ಮುಗಿದ ನಂತರ ಆರ್ಮುಗಂ ಡಿವೈ ಎಸ್.ಪಿ ಯವರನ್ನು "ಸೂಳೆಮಗನೆ, ನನ್ನ ಬೆಂಬಲಿಗರನ್ನು ಯಾಕೆ ಬಂಧಿಸಿದ್ದೀಯಾ. ಕೂಡಲೆ ಅವರನ್ನು ಬಿ ಡು ಗ ಡೆ ಮಾಡು ಇಲ್ಲದಿದ್ದರೆ, ನಿನ್ನನ್ನು ಸ ಸ್ಪೆಂ ಡ್ ಮಾಡಿಸಿಬಿಟ್ಟೇನು" ಎಂದು ಗದರಿದಾಗ ಡಿವೈ. ಎಸ್.ಪಿ. "ಹಲ್ಲು ಬಿಗಿಹಿಡಿದು ಮಾತನಾಡು. ಎಂ.ಎಲ್.ಎ. ಆದರೆ ನಿನ್ನ ಮನೆಗೆ. ನನಗೇನು. ಮೊದಲು ಇಲ್ಲಿಂದ ಹೊ ರ ಟು ಹೋಗು" ಎಂದರು.

ಆರ್ಮುಗಂ ಬೆದರಿಕೆಯಿಂದ ಉಸಿರುಕಟ್ಟಿದ್ದ ಜನಕ್ಕೆ ಈಗ ನಿರಾತಂಕವಾಗಿ ಉಸಿರಾಡುವಂತಾಯಿತು.

....

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ವಿನ್ಯಾಸ ಪ್ರಿಂಟರ್ಸ್, 12ನೇ ಮೇನ್, 3ನೇಕ್ರಾಸ್, ಮೈಸೂರು-9 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು, ವಿಳಾಸ: ಮಾಸ್ತಿಗುಡಿ, 2ನೇ ಕ್ರಾಸ್, ಅಶೋಕಪುರಂ, ಮೈಸೂರು–9